ಒಳಗೊಳ್ಳುತ್ತದೆ.

## 5.6. ಗ್ರಾಹಕರ ಸಂರಕ್ಷಣಾ ಮಂಡಳಿಗಳು
## (Consumer Protection Councils)

ಕೇಂದ್ರ ಸರ್ಕಾರವು ರಾಷ್ಟ್ರ ಮಟ್ಟದಲ್ಲಿ ಸ್ಥಾಪಿಸಲು ಕೇಂದ್ರ ಗ್ರಾಹಕ ಸಂರಕ್ಷಣಾ ಮಂಡಳಿಯನ್ನು ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿ ರಾಜ್ಯ ಗ್ರಾಹಕ ರಕ್ಷಣೆಯ ಮಂಡಳಿಗಳನ್ನು ಸ್ಥಾಪಿಸಲಿಕ್ಕೆ ಈ ಅಧಿನಿಯಮವು ಅವಕಾಶ ಮಾಡಿಕೊಟ್ಟಿದೆ. ಈ ಮಂಡಳಿಗಳು ಸಲಹಾ ಸಮಿತಿಯಂತೆ ಕಾರ್ಯ ಮಾಡುತ್ತವೆ.

Scanned with CamScanner

## ಪ) ಕೇಂದ್ರ ಗ್ರಾಹಕರ ರಕ್ಷಣಾ ಮಂಡಳಿ ಸ್ಥಾಪನೆ (ಪರಿಚ್ಛೇದ 4)
(Central Consumer Protection Council)

### 1. ಕೇಂದ್ರ ಮಂಡಳಿ ರಚನೆ (Constitution of Central Council)

1. ಸರಕಾರಿ ರಾಜ್ಯ ಪತ್ರದಲ್ಲಿ ಪ್ರಕಟಣೆಯ ಮೂಲಕ ಕೇಂದ್ರ ಸರಕಾರವು ಕೇಂದ್ರ ಗ್ರಾಹಕರ ಸಂರಕ್ಷಣಾ ಸಮಿತಿಯನ್ನು (ಇದನ್ನು ಇನ್ನು ಮುಂದೆ ಕೇಂದ್ರ ಸಮಿತಿ ಎಂದು ಉಲ್ಲೇಖಿಸಲಾಗುವ) ಸ್ಥಾಪಿಸತಕ್ಕದು. ಅದು ಈ ಕೆಳಗಿನಂತೆ 150 ಸದಸ್ಯರನ್ನು ಹೊಂದಿರತಕ್ಕದ್ದು; ಅಂದರೆ,

ಎ) ನಾಗರಿಕ ಪೂರೈಕೆ ಇಲಾಖೆಯ ಪ್ರಭಾರದಲ್ಲಿರುವ ಮಂತ್ರಿ ಮತ್ತು ಆತನು ಕೇಂದ್ರ ಸಮಿತಿಯ ಸಭಾಪತಿಯಾಗಿರತಕ್ಕದ್ದು.

ಬಿ) ನಾಗರಿಕ ಪೂರೈಕೆ ಇಲಾಖೆಯ ರಾಜ್ಯ ಮಂತ್ರಿ (ಆತನು ಸ್ವತಂತ್ರ ಪ್ರಭಾರವನ್ನು ಹೊಂದದದಿರುವಲ್ಲಿ) ಅಥವಾ ಡೆಪ್ಯೂಟಿ ಮಂತ್ರಿ, ಆತನು ಕೇಂದ್ರ ಸಮಿತಿಯ ಉಪಸಭಾಪತಿಯಾಗಿರತಕ್ಕದ್ದು.'

ಸಿ) ರಾಜ್ಯಗಳಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆಯ ಮಂತ್ರಿ ಅಥವಾ ಗ್ರಾಹಕರ ವ್ಯವಹಾರಗಳ ಪ್ರಭಾರದಲ್ಲಿರುವ ಮಂತ್ರಿ;

ಡಿ) ಸಂಸತ್ತಿನ ಎಂಟು ಸದಸ್ಯರು– ಲೋಕಸಭೆಯಿಂದ ಐದು ಮತ್ತು ರಾಜ್ಯ ಸಭೆಯಿಂದ ಮೂರು.

ಇ) ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಆಯುಕ್ತರು (Commissioner).

ಎಫ್) ಗ್ರಾಹಕರ ಹಿತಾಸಕ್ತಿಗಳಿಗೆ ಸಂಬಂಧಪಟ್ಟ ಕೇಂದ್ರ ಸರಕಾರದ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿಗಳು, ಇಪ್ಪತ್ತನ್ನು ಮೀರದಂತೆ;

ಜಿ) ಗ್ರಾಹಕರ ಸಂಘಗಳ ಅಥವಾ ಗ್ರಾಹಕರ ಪ್ರತಿನಿಧಿಗಳು ಮೂವತ್ತೈದಕ್ಕೆ ಕಡಿಮೆಯಿಲ್ಲದಂತೆ;

ಎಚ್) ಮಹಿಳಾ ಪ್ರತಿನಿಧಿಗಳು ಹತ್ತಕ್ಕಿಂತ ಕಡಿಮೆಯಿಲ್ಲದಂತೆ;

ಆಯ್) ರೈತರ, ವ್ಯಾಪಾರ ಮತ್ತು ಉದ್ದಿಮ್ಮೆಗಳ ಪ್ರತಿನಿಧಿಗಳು ಇಪ್ಪತ್ತನ್ನು ಮೀರದಂತೆ;

ಜೆ) ಮೇಲೆ ಗೊತ್ತುಪಡಿಸಲಾಗಿರದ, ಗ್ರಾಹಕರ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಸಮರ್ಥರಾಗಿರುವ ವ್ಯಕ್ತಿಗಳು ಹದಿನೈದನ್ನು ಮೀರದಂತೆ;

ಕೆ) ನಾಗರಿಕ ಪೂರೈಕೆ ಇಲಾಖೆಯ ಕಾರ್ಯದರ್ಶಿಯು ಆತನು ಕೇಂದ್ರ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

2. ಕೇಂದ್ರ ಸಮಿತಿಯ ಅವಧಿಯು ಮೂರು ವರ್ಷದ್ದಾಗಿರತಕ್ಕದ್ದು.

3. ಸಭೆ ನಡೆಸುವದಕ್ಕೆ ಸಂಬಂಧಿಸಿ 10 ದಿವಸಗಳ ನೋಟೀಸನ್ನು ಪ್ರತಿಯೊಬ್ಬ ಸದಸ್ಯನಿಗೂ ಕಳಿಸತಕ್ಕದ್ದು.

Scanned with CamScanner

4. ಯಾವುದೇ ಸದಸ್ಯನು, ಕೇಂದ್ರ ಸಮಿತಿಯ ಸಭಾಪತಿಗೆ ತನ್ನ ಹಸ್ತಾಕ್ಷರದಲ್ಲಿ ಬರಹದ ಮೂಲಕ ತಿಳಿಸಿ ರಾಜೀನಾಮೆ ಸಲ್ಲಿಸಬಹುದು; ಹಾಗೆ ಅಥವಾ ಅನ್ಯಥಾ ಉಂಟಾದ ಖಾಲಿ ಸ್ಥಾನವನ್ನು ಅದೇ ಪ್ರವರ್ಗದಿಂದ ಕೇಂದ್ರ ಸರಕಾರವು ಭರ್ತಿ ಮಾಡತಕ್ಕದ್ದು ಮತ್ತು ಆ ವ್ಯಕ್ತಿಯು ತಾನು ಯಾವ ಸದಸ್ಯನ ಸ್ಥಾನವನ್ನು ತುಂಬುತ್ತಾನೋ ಆ ಸದಸ್ಯನು ಖಾಲಿ ಸ್ಥಾನ ಉಂಟಾಗದಿದ್ದರೆ ಆ ಪದವನ್ನು ಹೊಂದಲು ಹಕ್ಕುಳ್ಳವನಾಗಿರುವಷ್ಟರವರೆಗೆ ಮಾತ್ರ ಪದದಲ್ಲಿರತಕ್ಕದ್ದು.

- **ಕೇಂದ್ರ ಮಂಡಳಿಯ ಸಭೆಯ ವಿಧಾನ (ಪರಿಚ್ಛೇದ 5)**

(Procedure for Meetings of Central Council)

ಕೇಂದ್ರ ಸಮಿತಿಯು 5 ನೇ ಕಲಮಿನ (2) ನೇ ಉಪಕಲಮಿನ ಮೇರೆಗೆ ತನ್ನ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಕೆಳಗೆ ಹೇಳಲಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

1. ಕೇಂದ್ರ ಸಮಿತಿಯ ಸಭೆಯ ಅಧ್ಯಕ್ಷತೆಯನ್ನು ಸಭಾಪತಿಯು ವಹಿಸತಕ್ಕದು. ಸಭಾಪತಿಯ ಗೈರು ಹಾಜರಿಯಲ್ಲಿ ಕೇಂದ್ರ ಸಮಿತಿಯ ಅಧ್ಯಕ್ಷತೆಯನ್ನು ಉಪಸಭಾಪತಿ ವಹಿಸತಕ್ಕದು. ಸಭಾಪತಿ ಮತ್ತು ಉಪಸಭಾಪತಿಯವರ ಗೈರು ಹಾಜರಿಯಲ್ಲಿ ಕೇಂದ್ರ ಸಮಿತಿಯು ಸಭೆಯ ಅಧ್ಯಕ್ಷತೆ ವಹಿಸಲು ಸದಸ್ಯನೊಬ್ಬನನ್ನು ಆಯ್ಕೆ ಮಾಡತಕ್ಕದ್ದು.

2. ಕೇಂದ್ರ ಸಮಿತಿಯ ಪ್ರತಿಯೊಂದು ಸಭೆಯನ್ನು ನೋಟೀಸನ್ನು ಹೊರಡಿಸಿದ ದಿನಾಂಕದಿಂದ ಹತ್ತು ದಿವಸಗಳಿಗೆ ಕಡಿಮೆಯಾಗದಂತೆ ಪ್ರತಿಯೊಬ್ಬ ಸದಸ್ಯನಿಗೂ ಬರಹದಲ್ಲಿ ನೋಟೀಸನ್ನು ಕೊಡುವ ಮೂಲಕ ಕರೆಯತಕ್ಕದ್ದು.

3. ಸಭೆಯ ಪ್ರತಿಯೊಂದು ನೋಟೀಸೂ ಸಭೆ ನಡೆಯುವ ಸ್ಥಳ, ದಿವಸ ಮತ್ತು ವೇಳೆಯನ್ನು ತಿಳಿಸತಕ್ಕದು ಮತ್ತು ಅದು ಅಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳ ಬಗ್ಗೆ ವಿವರವನ್ನು ಹೊಂದಿರತಕ್ಕದ್ದು.

4. ಕೇಂದ್ರ ಸಮಿತಿಯ ಯಾವುದೇ ವ್ಯವಹರಣೆಗಳು ಕೇವಲ ಅದರಲ್ಲಿ ಖಾಲಿ ಸ್ಥಾನವಿದ ಎಂಬ ಅಥವಾ ಸಭೆಯ ರಚನೆಯಲ್ಲಿ ಯಾವುದೇ ನ್ಯೂನ್ಯತೆ ಇದೆ ಎಂಬ ಕಾರಣ ಮಾತ್ರದಿಂದ ಅಸಿಂಧುವಾಗತಕ್ಕದ್ದಲ್ಲ.

5. ಕೇಂದ್ರ ಸಮಿತಿಯು, ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ನೆರವೇರಿಸುವ ಉದ್ದೇಶಕ್ಕಾಗಿ, ತನ್ನ ಸದಸ್ಯರಲ್ಲಿಯೇ, ತಾನು ಅವಶ್ಯವೆಂದು ಭಾವಿಸುವಂಥ ಕಾರ್ಯಕಾರಿ ಗುಂಪುಗಳನ್ನು ರಚಿಸತಕ್ಕದು ಮತ್ತು ಹಾಗೆ ರಚಿತವಾದ ಪ್ರತಿಯೊಂದು ಕಾರ್ಯಕಾರಿ ಗುಂಪು ಕೇಂದ್ರ ಸಮಿತಿಯು ಅದಕ್ಕೆ ವಹಿಸಿಕೊಟ್ಟಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕುದು. ಅಂಥ ಕಾರ್ಯಕಾರಿ ಗುಂಪುಗಳ ನಿರ್ಣಯಗಳನ್ನು ಕೇಂದ್ರ ಸಮಿತಿಯ ಪರ್ಯಾಲೋಚನೆಗಾಗಿ ಅದರ ಮುಂದಿಡತಕ್ಕದ್ದು.

- **ಕೇಂದ್ರ ಮಂಡಳಿಯ ಉದ್ದೇಶಗಳು (ಪರಿಚ್ಛೇದ 6)**

(Objects of the Central Council)

ಎ) ಜೀವ ಮತ್ತು ಸ್ವತ್ತಿಗೆ ಅಪಾಯಕಾರಿ ಆಗಿರುವಂಥ ಸರಕುಗಳನ್ನು ಮತ್ತು ಸೇವೆಗಳನ್ನು ಮಾರಾಟ ಮಾಡುವುದರ ವಿರುದ್ಧ ರಕ್ಷಣೆ ಪಡೆಯುವ ಹಕ್ಕನ್ನು;

Scanned with CamScanner

ಬಿ) ಅನುಚಿತ ವ್ಯಾಪಾರಿ ಕ್ರಮದ ವಿರುದ್ಧ ಗ್ರಾಹಕನನ್ನು ರಕ್ಷಿಸುವುದಕ್ಕಾಗಿ ಸರಕುಗಳ ಅಥವಾ ಸಂದರ್ಭಾನುಸಾರ ಸೇವೆಗಳ ಗುಣ, ಪ್ರಮಾಣ, ಸತ್ವ, ಶುದ್ಧತೆ, ಮಟ್ಟ ಮತ್ತು ಬೆಲೆಗಳ ಬಗ್ಗೆ ಮಾಹಿತಿ ಪಡೆಯುವ ಹಕ್ಕು.

ಸಿ) ಸಾಧ್ಯವಿರುವಲ್ಲೆಲ್ಲ ಸ್ಪರ್ಧಾತ್ಮಕ ಬೆಲೆಗಳಲ್ಲಿ ಸರಕುಗಳ ಮತ್ತು ಸೇವೆಗಳ ವೈವಿಧ್ಯತೆಗೆ ಅವಕಾಶ ದೊರಕಿಸಿಕೊಳ್ಳುವ ಬಗ್ಗೆ ಭರವಸೆಯ ಹಕ್ಕು;

ಡಿ) ಸಮುಚಿತ ವೇದಿಕೆಗಳಿಂದ ಗ್ರಾಹಕರ ಹಕ್ಕುಗಳೂ ಯುಕ್ತ ಗಮನ ಪಡೆಯುತ್ತವೆ ಎಂಬ ಬಗ್ಗೆ ಸುಣಾವಣೆಗೆ ಮತ್ತು ಭರವಸೆಗೆ ಹಕ್ಕು;

ಇ) ಅನುಚಿತ ವ್ಯಾಪಾರಿ ಕ್ರಮಗಳ ಅಥವಾ ಪರಿಬಂಧಕ ವ್ಯಾಪಾರಿ ಕ್ರಮಗಳ ಅಥವಾ ಗ್ರಾಹಕರ ಅನ್ಯಾಯದ ಶೋಷಣೆಯ ವಿರುದ್ಧ ಪರಿಹಾರ ಕೇಳಲು ಹಕ್ಕು;

ಎಫ್) ಗ್ರಾಹಕರ ಶಿಕ್ಷಣಕ್ಕೆ ಹಕ್ಕು;

ಗ್ರಾಹಕರ ಇಂಥ ಹಕ್ಕುಗಳನ್ನು ಅಭಿವೃದ್ಧಿ ಪಡಿಸುವುದು ಮತ್ತು ಸಂರಕ್ಷಿಸುವುದು ಇರತಕ್ಕದ್ದು.

## ಡಿ) ರಾಜ್ಯ ಗ್ರಾಹಕ ರಕ್ಷಣಾ ಮಂಡಳಿಗಳು (ಪರಿಚ್ಛೇದ 7) (State Consumer Protection Councils)

### ● ರಾಜ್ಯ ಮಂಡಳಿಯ ರಚನೆ (Constitution of State Council)

1. ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ದಿನಾಂಕದಿಂದ ಜಾರಿಯಲ್ಲಿ ಬರುವಂತೆ.... ಗ್ರಾಹಕರ ಸಂರಕ್ಷಣಾ ಮಂಡಳಿ ಎಂಬ ಹೆಸರಿನ ಮಂಡಳಿಯನ್ನು ಸ್ಥಾಪಿಸಬಹುದು. ( ಈ ನಂತರ ರಾಜ್ಯ ಮಂಡಳಿ ಎಂದು ಉಲ್ಲೇಖಿಸಲಾಗುವುದು).
2. ರಾಜ್ಯ ಮಂಡಳಿಯು ಕೆಳಗೆ ಹೆಸರಿಸಲಾದ ಸದಸ್ಯರನ್ನು ಹೊಂದಿರತಕ್ಕದ್ದು ಅಂದರೆ,
   ಎ) ಗ್ರಾಹಕರ ವಿಷಯಗಳಿಗೆ ಸಂಬಂಧಿಸಿದ ಆ ರಾಜ್ಯದ ಮಂತ್ರಿ ಮತ್ತು ಆತನು ಅಧ್ಯಕ್ಷನಾಗಿರತಕ್ಕದು.
   ಬಿ) ರಾಜ್ಯ ಸರಕಾರವು ಗೊತ್ತುಪಡಿಸಬಹುದಾದಂಥ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಪದೀಯ ಅಥವಾ ಪದೀಯರಲ್ಲದ ಮತ್ತು ಅಂಥ ಸಂಖ್ಯೆಯ ಇತರ ಸದಸ್ಯರು.
3. ರಾಜ್ಯ ಮಂಡಳಿಯು ಅಗತ್ಯವಿರುವಾಗಲೆಲ್ಲ ಸಭೆ ಸೇರತಕ್ಕದು; ಆದರೆ ಪ್ರತಿವರ್ಷವೂ ಎರಡಕ್ಕಿಂತ ಕಡಿಮೆಯಿಲ್ಲದಂತೆ ಸಭೆ ಸೇರತಕ್ಕದು.
4. ಅಧ್ಯಕ್ಷನು ಯುಕ್ತವೆಂದು ಭಾವಿಸುವ ವೇಳೆ ಮತ್ತು ಸ್ಥಳದಲ್ಲಿ ಮಂಡಳಿಯು ಸಭೆ ಸೇರತಕ್ಕದು ಮತ್ತು ಅದರ ಕಾರ್ಯ ನಿರ್ವಹಣೆಗೆ ಸಂಬಂಧಿಸಿದಂತೆ ರಾಜ್ಯ ಸರಕಾರವು ಗೊತ್ತುಪಡಿಸಬಹುದಾದ ಪ್ರಕ್ರಿಯೆಯನ್ನು ಅನುಸರಿಸತಕ್ಕದು.

ಇಂತಹ ಮಂಡಳಿಯು ಪ್ರತಿ ರಾಜ್ಯಕ್ಕೆ ಒಂದು ಇರುತ್ತದೆ. ಇದು ತನಗೆ ಅವಶ್ಯವೆನಿಸಿದಾಗ ಸಭೆ ಸೇರಬೇಕಾಗಿದ್ದು, ಆದರೆ ಒಂದು ವರ್ಷದಲ್ಲಿ ಕನಿಷ್ಟ ಎರಡು ಸಭೆಗಳನ್ನು ನಡೆಸಬೇಕು. ಕಾರ್ಯಾಧ್ಯಕ್ಷನು ಅವಶ್ಯವೆನಿಸಿದಾಗ, ಅವರಿಚ್ಛಿಸಿದ ಸ್ಥಳ ಮತ್ತು ಸಮಯದಲ್ಲಿ ಸಭೆ

Scanned with CamScanner

ನಡೆಸಬಹುದಾಗಿದೆ. ಅದರ ವಿಧಾನ ಮತ್ತು ವ್ಯವಹಾರದ ವಿವರಗಳನ್ನು ರಾಜ್ಯ ಸರ್ಕಾರ ಸೂಚಿಸಿದಂತಿರುತ್ತದೆ.

- ರಾಜ್ಯ ಮಂಡಳಿಯ ಉದ್ದೇಶಗಳು (Objects of State Council) (ಪರಿಚ್ಛೇದ 8)

ಪ್ರತಿಯೊಂದು ರಾಜ್ಯ ಮಂಡಳಿಯ ಉದ್ದೇಶವು ಆದ (6) ನೇ ಕಲಮಿನ (ಎ) ದಿಂದ (ಎಫ್) ವಾಕ್ಯಾವಳಿಗಳಲ್ಲಿ ಹೇಳಲಾಗಿರುವ ಗ್ರಾಹಕರ ಹಕ್ಕುಗಳನ್ನು ರಾಜ್ಯದಲ್ಲಿ ಅಭಿವೃದ್ಧಿಪಡಿಸುವುದು ಮತ್ತು ಸಂರಕ್ಷಿಸುವುದು ಆಗಿರುತ್ತದೆ.

ಕ) ಜಿಲ್ಲಾ ಗ್ರಾಹಕರ ರಕ್ಷಣಾ ವೇದಿಕೆ
(District Consumer Protection Forum) **ಪರಿಚ್ಛೇದ 8** A

- ರಚನೆ

ಹೊಸ ತಿದ್ದುಪಡೆಯ ಅಧಿನಿಯಮದ ಪರಿಚ್ಛೇದ 8A ದ ಪ್ರಕಾರ, ರಾಜ್ಯ ಸರ್ಕಾರವು ತನ್ನ ಅಧಿಸೂಚನೆಯ ಮೂಲಕ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಗ್ರಾಹಕರ ರಕ್ಷಣಾ ವೇದಿಕೆಯನ್ನು ಸ್ಥಾಪಿಸಬೇಕು. ಅದು ಈ ಕೆಳಗಿನ ಸದಸ್ಯರನ್ನು ಒಳಗೊಂಡಿರುತ್ತದೆ.

i) ಜಿಲ್ಲಾಧಿಕಾರಿಯು ಅದರ ಅಧ್ಯಕ್ಷರಾಗಿರುತ್ತಾರೆ.

ii) ರಾಜ್ಯ ಸರ್ಕಾರ ಸೂಚಿಸಿದಷ್ಟು ಕಛೇರಿಯ ಅಥವಾ ಕಛೇರಿಯೇತರ ಸದಸ್ಯರನ್ನು ಹೊಂದಿರಬೇಕು.

ವೇದಿಕೆಯು ಅವಶ್ಯವೆನಿಸಿದಾಗ ಸಭೆಗಳನ್ನು ನಡೆಸಬೇಕು. ಆದರೆ ವರ್ಷಕ್ಕೆ ಎರಡಕ್ಕಿಂತ ಕಡಿಮೆ ಇಲ್ಲದಷ್ಟು ಸಭೆಗಳನ್ನು ಜರುಗಿಸಬೇಕು.

- ಉದ್ದೇಶಗಳು (Objects) **ಪರಿಚ್ಛೇದ 8 B**

ಇದೇ ಕಾಯ್ದೆಯ ಪರಿಚ್ಛೇದ 6 ರ ಅಡಿಯಲ್ಲಿ ನಮೂದಿಸಿದ (a) ದಿಂದ (f) ದವರೆಗಿನ ಗ್ರಾಹಕರ ಹಕ್ಕುಗಳನ್ನು ಜಿಲ್ಲಾದ್ಯಂತ ರಕ್ಷಿಸುವದು ಮತ್ತು ಉತ್ತೇಜಿಸುವುದು ಈ ವೇದಿಕೆಯ ಉದ್ದೇಶಗಳಾಗಿರುತ್ತವೆ.

- ಆಕ್ಷೇಪಣೆಗಳನ್ನು ಎಲ್ಲಿ ಸಲ್ಲಿಸುವದು ?

ಒಂದು ವೇಳೆ ಸೇವೆ ಅಥವಾ ಸರಕುಗಳ ಮೌಲ್ಯ ಮತ್ತು ಕೇಳಿದ ಪರಿಹಾರ ರೂ. 20 ಲಕ್ಷಗಳಿಗಿಂತ ಕಡಿಮೆ ಇದ್ದಾಗ, ರಾಜ್ಯ ಸರ್ಕಾರವು ಸೂಚಿಸುವಂತೆ ವ್ಯಾಜ್ಯಕ್ಕೆ ಸಂಬಂಧಿಸಿದ ಜಿಲ್ಲೆಯಲ್ಲಿ ಅಥವಾ ಎದುರಿನ ಕಕ್ಷಿದಾರನು ವಾಸಿಸುವ ಜಿಲ್ಲೆಯಲ್ಲಿನ ಜಿಲ್ಲಾ ಗ್ರಾಹಕ ರಕ್ಷಣಾ ವೇದಿಕೆಗೆ ಸಲ್ಲಿಸುವುದು.

ಆದರೆ, ಅಂತಹ ಮೌಲ್ಯ ಮತ್ತು ಪರಿಹಾರ ರೂ. 20 ಲಕ್ಷಗಿಂತ ಹೆಚ್ಚು ಆದರೆ ರೂ. ಒಂದು ಕೋಟಿಗಿಂತ ಕಡಿಮೆಯಿದ್ದರೆ, ಅಂತಹ ದೂರನ್ನು ರಾಜ್ಯ ಸರ್ಕಾರ ಅಥವಾ ಸಂಬಂಧಿತ ಕೇಂದ್ರಾಡಳಿತ ಪ್ರದೇಶವು ಸೂಚನೆ ನೀಡಿದಂತೆ ರಾಜ್ಯಗ್ರಾಹಕ ರಕ್ಷಣಾ ಆಯೋಗದ ಎದುರು ಸಲ್ಲಿಸಬೇಕಾಗುತ್ತದೆ. ಒಂದು ವೇಳೆ ಅಂತಹ ಮೌಲ್ಯವು ರೂ. ಒಂದು ಕೋಟಿಗಿಂತ ಹೆಚ್ಚಾದರೆ, ಅದನ್ನು ಕೇಂದ್ರದ ದಹಲಿಯ ರಾಷ್ಟ್ರೀಯ ಆಯೋಗಕ್ಕೆ ಸಲ್ಲಿಸಬೇಕಾಗುತ್ತದೆ.

Scanned with CamScanner

### ದೂರನ್ನು ಹೇಗೆ ಸಲ್ಲಿಸಬೇಕು ?

ದೂರುಗಳನ್ನು ಸಲ್ಲಿಸಲು ಮತ್ತು ಪರಿಹಾರ ಪಡೆಯಲು ಸೂಚಿಸಿದ ವಿಧಾನವು ಸರಳವೂ ಮತ್ತು ಶೀವ್ರತರವಾದದ್ದಾಗಿದೆ.

ಜಿಲ್ಲಾ ವೇದಿಕೆಗೆ ದೂರು ಸಲ್ಲಿಸಲು ಯಾವುದೇ ಶುಲ್ಕ ನೀಡಬೇಕಾಗಿಲ್ಲ. ಅದರಂತೆ ರಾಜ್ಯ ಆಯೋಗಕ್ಕಾಗಲಿ ಅಥವಾ ರಾಷ್ಟ್ರೀಯ ಆಯೋಗಕ್ಕಾಗಿಯೂ ಶುಲ್ಕ ಪಾವತಿಸಬೇಕಾಗಿಲ್ಲ.

ದೂರು ನೀಡುವಾತ (ಆಕ್ಷೇಪಕ) ಅಥವಾ ಆತನ ಪ್ರತಿನಿಧಿಯು ಖುದ್ದಾಗಿ ದೂರು ಸಲ್ಲಿಸಬೇಕಾಗುತ್ತದೆ. ಆದರೆ, ಅದನ್ನು ವೇದಿಕೆ ಅಥವಾ ಆಯೋಗಕ್ಕೆ ಅಂಚೆ ಮೂಲಕವು ರವಾನಿಸಬಹುದಾಗಿದೆ.

ಸಲ್ಲಿಸುವ ದೂರಿನಲ್ಲಿ ಈ ಕೆಳಗಿನ ಅಂಶಗಳಿರತಕ್ಕದ್ದು.

a) ಫಿರ್ಯಾದುದಾರನ ಹೆಸರು, ವಿವರಣೆ, ವಿಳಾಸ.

b) ಎದುರು ಕಕ್ಷಿದಾರನ/ರ ಹೆಸರು, ವಿವರಣೆ, ವಿಳಾಸವನ್ನು ಹುಡುಕುವಲ್ಲಿ ಸಹಾಯವಾಗುವಷ್ಟು ಮಾಹಿತಿ.

c) ದೂರಿಗೆ ಸಂಬಂಧಿಸಿದ ಘಟನೆ, ಅದು ಎಲ್ಲಿ ಮತ್ತು ಯಾವಾಗ ಉದ್ಭವಿಸಿದ್ದು.

d) ದೂರಿಗೆ ಸಂಬಂಧಿಸಿದ ದಾಖಲು/ ಕಾಗದಪತ್ರಗಳು.

e) ಫಿರ್ಯಾದುದಾರನು ಅಪೇಕ್ಷಿಸುವ ಪರಿಹಾರ.

ದೂರು ಫಿರ್ಯಾದಿದಾರನ ಅಥವಾ ಅವನ ಪ್ರತಿನಿಧಿಯ ಸಹಿಯನ್ನು ಒಳಗೊಂಡಿರಬೇಕು.

### • ಗ್ರಾಹಕರಿಗೆ ಲಭ್ಯವಿರುವ ಪರಿಹಾರಗಳು

ಗ್ರಾಹಕರು ಅಪೇಕ್ಷಿಸಿದ ಪರಿಹಾರ ಮತ್ತು ಘಟನೆಗಳನ್ನಾಧರಿಸಿ, ಪರಿಹಾರ ವೇದಿಕೆ/ ಆಯೋಗವು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಪರಿಹಾರಗಳನ್ನು ನೀಡಬಹುದಾಗಿದೆ.

i) ಸರಕಿನಿಂದ ದೋಷಗಳನ್ನು ಸರಿಪಡಿಸುವದು.

ii) ಸರಕುಗಳನ್ನು ಬದಲಿಸಿ ಕೊಡುವದು.

iii) ಪಾವತಿಸಿದ ಬೆಲೆಯನ್ನು ಹಿಂತಿರುಗಿಸುವುದು.

iv) ಅನುಭವಿಸಿದ ನಷ್ಟ ಅಥವಾ ಕಷ್ಟಕ್ಕೆ ದ್ರವ್ಯಪರಿಹಾರ ನೀಡುವುದು.

v) ಅಪಾಯಕಾರಕ ಸರಕುಗಳನ್ನು ಮಾರದಿರುವ ನಿರ್ಬಂಧ.

vi) ಕಕ್ಷಿದಾರರಿಗೆ ಸಾಕಷ್ಟು ವೆಚ್ಚಗಳನ್ನು ಭರಿಸುವ ಅವಕಾಶ ನೀಡುವದು.

## 5.7. ಗ್ರಾಹಕರ ವಿವಾದಗಳ ಪರಿಹಾರ ನಿಯೋಗಗಳು

**(Consumer Disputes Redressal Agencies)**

ಗ್ರಾಹಕರ ಸಂರಕ್ಷಣಾ ಅಧಿನಿಯಮವು ಮೂರು ಹಂತದ ಗ್ರಾಹಕರ ವಿವಾದಗಳ ಪರಿಹಾರ ನಿಯೋಗಗಳ ಸ್ಥಾಪನೆಗೆ ಅವಕಾಶ ಮಾಡಿಕೊಡುತ್ತದೆ. ಅಂದರೆ– 1) ಜಿಲ್ಲಾ

Scanned with CamScanner

ಮಟ್ಟದಲ್ಲಿ ಜಿಲ್ಲಾ ವೇದಿಕೆ 2) ರಾಜ್ಯ ಮಟ್ಟದಲ್ಲಿ ರಾಜ್ಯ ಆಯೋಗ ಮತ್ತು 3) ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಆಯೋಗ.

- **ಪರಿಹಾರ ನಿಯೋಗಗಳು (Redressal Forums) ಪರಿಚ್ಛೇದ 9**

ಈ ಅಧಿನಿಯಮದ ಉದ್ದೇಶಗಳಿಗಾಗಿ ಕೆಳಗೆ ಹೇಳಿದ ನಿಯೋಗಗಳು ಸ್ಥಾಪಿತವಾಗತಕ್ಕುದು, ಅಂದರೆ–

1. ರಾಜ್ಯ ಸರಕಾರವು ಕೇಂದ್ರ ಸರಕಾರದ ಪೂರ್ವಾನುಮೋದನೆಯಿಂದ ಪ್ರತಿಯೊಂದು ಜಿಲ್ಲೆಯಲ್ಲಿ ಅಧಿಸೂಚನೆಯ ಮೂಲಕ ಸ್ಥಾಪಿಸಿದ ''ಜಿಲ್ಲಾ ವೇದಿಕೆ'' (District Forum)ಎಂಬ ಹೆಸರಿನ ಗ್ರಾಹಕರ ವಿವಾದಗಳ ಪರಿಹಾರ ವೇದಿಕೆ.

ಬಿ) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ರಾಜ್ಯದಲ್ಲಿ ಸ್ಥಾಪಿಸಿದ ''ರಾಜ್ಯ ಆಯೋಗ'' (State Commission) ಎಂಬ ಹೆಸರಿನ ಗ್ರಾಹಕರ ವಿವಾದಗಳ ಪರಿಹಾರ ಆಯೋಗ, ಮತ್ತು

ಸಿ) ಕೇಂದ್ರ ಸರಕಾರವು ಅಧಿಸೂಚನೆಯ ಮೂಲಕ ಸ್ಥಾಪಿಸಿದ ''ರಾಷ್ಟ್ರೀಯ ಗ್ರಾಹಕರ ವಿವಾದಗಳ ಪರಿಹಾರ ಆಯೋಗ'' (National Consumer Disputes Redressal Commission).

- **ಗ್ರಾಹಕರ ವೇದಿಕೆಗಳ ಅಧಿಕಾರ ವ್ಯಾಪ್ತಿ (Jurisdiction of Consumer Forums)**

ಗ್ರಾಹಕರು ಇನ್ನುಳಿದ ಬೇರೆ ಕಾಯ್ದೆಗಳಡಿಯಲ್ಲಿ ಇತರ ಪರಿಹಾರಗಳನ್ನು ಪಡೆಯಬಹುದು. ಈ ಕಾನೂನಿನ ಪರಿಚ್ಛೇದಗಳು ಅಂತಹ ಬೇರೆ ಕಾಯ್ದೆಗಳಿಗೆ ಪೂರಕವಾಗಿಯೇ ಹೊರತು, ಅವುಗಳನ್ನು ಅಲ್ಪಗೊಳಿಸಲು ಅಥವಾ ವಿರುದ್ಧವಾಗಿ ನೀಡಿದ್ದಲ್ಲ.

- **ಕಾಲಮಿತಿ (Limitation)**

ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ಕೇಂದ್ರ ಆಯೋಗದ ಮುಂದೆ ಆಕ್ಷೇಪಣೆಗಳನ್ನು ಅವುಗಳು ಉದ್ಭವಿಸಿದ ದಿನದಿಂದ ಮುಂದಿನ ಎರಡು ವರ್ಷದೊಳಗೆ ಸಲ್ಲಿಸಬೇಕಾಗುತ್ತದೆ.

ಆದರೂ ಈ ಎರಡು ವರ್ಷಗಳ ನಂತರವೂ ಸಹ ಈ ಮೂರು ವೇದಿಕೆ ಹಾಗೂ ಆಯೋಗಗಳು ದೂರುಗಳನ್ನು ಸ್ವೀಕರಿಸಬಹುದು. ಅದಕ್ಕೆ ಫಿರ್ಯಾದುದಾರನು ಸಾಕಷ್ಟು ಕಾರಣಗಳನ್ನು ನೀಡಿದಾಗ, ಅವುಗಳ ಬಗ್ಗೆ ಆಯೋಗವು ಸಮಾಧಾನಗೊಂಡರೆ, ದೂರನ್ನು ದಾಖಲು ಮಾಡಿಕೊಳ್ಳಬಹುದಾಗಿದೆ. ಅದರಂತೆಯೇ, ಈ ವೇದಿಕೆ ಅಥವಾ ಆಯೋಗವು ದೂರು ನೀಡಲು ವಿಲಂಬವಾದುದಕ್ಕೆ ಕಾರಣವೇನೆಂಬುದನ್ನು ವ್ಯವಸ್ಥಿತವಾಗಿ ದಾಖಲಿಸಬೇಕು. (ಪರಿಚ್ಛೇದ 24A).

**ಅ) ಜಿಲ್ಲಾ ವೇದಿಕೆ (District Forum)**

ಅಧಿನಿಯಮದ ಪರಿಚ್ಛೇದ 9 ರಲ್ಲಿ ಸೂಚಿಸಿದಂತೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪ್ರತಿಯೊಂದು ತನ್ನ ಜಿಲ್ಲೆಗಳಲ್ಲಿ ಜಿಲ್ಲಾ ವೇದಿಕೆಗಳನ್ನು ಸ್ಥಾಪಿಸಲು ಅನುಮತಿ ನೀಡುತ್ತದೆ.

Scanned with CamScanner

ರಾಜ್ಯದಲ್ಲಿನ ಒಂದು ಜಿಲ್ಲೆಯಲ್ಲಿ ಒಂದಕ್ಕಿಂತ ಹೆಚ್ಚಿನ ವೇದಿಕೆಗಳು ಅವಶ್ಯವೆನಿಸಿದರೆ ರಾಜ್ಯ ಸರ್ಕಾರವು ಸ್ಥಾಪಿಸಬಹುದಾಗಿದೆ. ಜಿಲ್ಲಾ ವೇದಿಕೆಯ ರಚನೆ (ಪರಿಚ್ಛೇದ 10 ರಿಂದ 15 )ಯ ಪರಿಚ್ಛೇದ 10(1) ರಲ್ಲಿ ತಿಳಿಸಿದಂತೆ, ಈ ಕೆಳಗಿನ ಸದಸ್ಯರು ಇರುತ್ತಾರೆ.

**ಜಿಲ್ಲಾ ವೇದಿಕೆಯ ರಚನೆ**(Composition of the District Forum)

1. ಪ್ರತಿಯೊಂದು ಜಿಲ್ಲಾ ವೇದಿಕೆಯು,

ಎ) ಜಿಲ್ಲಾನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ಆಗಲು ಅರ್ಹನಾಗಿದ್ದ ವ್ಯಕ್ತಿ ಅದರ ಅಧ್ಯಕ್ಷನಾಗಿರತಕ್ಕದು.

ಬಿ) i) ಆತ 35 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು.

ii) ಯಾವುದೇ ಅಂಗೀಕೃತ ವಿಶ್ವವಿದ್ಯಾಲಯದ ಪದವಿ ಹೊಂದಿರಬೇಕು.

iii) ಸಾಮಾರ್ಥ್ಯ ನೀತಿ ನಿಷ್ಠೆ ಮತ್ತು ಗಣ್ಯಸ್ಥಾನ (ಸ್ಥಾನಮಾನ) ಹೊಂದಿದ ಮತ್ತು ಅರ್ಥಶಾಸ್ತ್ರ, ಕಾನೂನು, ವಾಣಿಜ್ಯ, ಲೆಕ್ಕಪತ್ರ, ಉದ್ಯಮ, ಸಾರ್ವಜನಿಕ ವ್ಯವಹಾರಗಳ ಅಥವಾ ಆಡಳಿತದ ಸಾಕಷ್ಟು ತಿಳುವಳಿಕೆ ಅಥವಾ ಅನುಭವವಿದ್ದ ಅಥವಾ ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವ್ಯವಹರಿಸುವ ಸಾಮರ್ಥ್ಯವನ್ನು ತೋರಿಸಿದ ಇತರ ಇಬ್ಬರು ಇತರ ಸದಸ್ಯರು. ಅವರಲ್ಲಿ ಒಬ್ಬರು ಮಹಿಳೆಯಾಗಿರತಕ್ಕದು. ಇವರನ್ನು ಒಳಗೊಂಡಿರತಕ್ಕದು.

(1ಎ) 1 ನೇ ಉಪಕಲಮಿನ ಮೇರೆಗಿನ ಪ್ರತಿಯೊಂದು ನೇಮಕಾತಿಯನ್ನು ರಾಜ್ಯ ಸರಕಾರವು ಕೆಳಗೆ ಹೇಳಿದವರನ್ನು ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನಂತೆ ಮಾಡತಕ್ಕದು ಅಂದರೆ.

i) ರಾಜ್ಯ ಆಯೋಗದ ಅಧ್ಯಕ್ಷರು – ಸಭಾಪತಿ

ii) ರಾಜ್ಯದ ಕಾನೂನು ಇಲಾಖೆಯ ಕಾರ್ಯದರ್ಶಿ ಸದಸ್ಯ

iii) ರಾಜ್ಯದಲ್ಲಿನ ಗ್ರಾಹಕರ ವಿಷಯಗಳ ಬಗ್ಗೆ ವ್ಯವಹರಿಸುವ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ ಸದಸ್ಯ.

2. ಜಿಲ್ಲಾ ವೇದಿಕೆಯ ಪ್ರತಿಯೊಬ್ಬ ಸದಸ್ಯನೂ ಐದು ವರ್ಷಗಳ ಅಥವಾ 65 ವರ್ಷಗಳ ವಯಸ್ಸಿನ ಯಾವುದು ಮೊದಲೋ ಆ ಅವಧಿಯವರೆಗೆ ಪದದಲ್ಲಿರತಕ್ಕದ್ದು ಮತ್ತು ಆತನು ಪುನಃ ನೇಮಕಾತಿಗೆ ಅರ್ಹನಾಗಿರತಕ್ಕದಲ್ಲ,

ಆದರೆ, ಸದಸ್ಯನು ಬರಹದಲ್ಲಿ ತನ್ನ ಸಹಿಯೊಂದಿಗೆ ರಾಜ್ಯ ಸರಕಾರಕ್ಕೆ ಬರೆದು ರಾಜೀನಾಮೆ ಸಲ್ಲಿಸಬಹುದು ಮತ್ತು ಅಂಥ ರಾಜೀನಾಮೆ ಸ್ವೀಕೃತವಾದಾಗ ಆತನ ಸ್ಥಾನವು ಖಾಲಿಯಾಗತಕ್ಕದು ಮತ್ತು ಅದನ್ನು ರಾಜೀನಾಮೆ ಸಲ್ಲಿಸಿದ ಸದಸ್ಯನ ಪ್ರವರ್ಗಕ್ಕೆ ಸಂಬಂಧಿಸಿದಂತೆ (1) ನೇ ಉಪಕಲಮಿನಲ್ಲಿ ಹೇಳಲಾಗಿರುವ ಯಾವುದೇ ಅರ್ಹತೆಗಳನ್ನು ಹೊಂದಿರುವ ವ್ಯಕ್ತಿಯನ್ನು ನೇಮಿಸಿ ಭರ್ತಿಮಾಡಬಹುದು.

3. ಜಿಲ್ಲಾ ವೇದಿಕೆಯ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನ ಅಥವಾ ಗೌರವ ಧನ ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರಕಾರವು

Scanned with CamScanner

ಗೊತ್ತುಪಡಿಸಿದಂತೆ ಇರತಕ್ಕದು. ಆದರೆ ಈ ಕೆಳಗಿನ ಅನರ್ಹತೆಗಳನ್ನು ಹೊಂದಿದ ವ್ಯಕ್ತಿಯು ಸದಸ್ಯನಾಗಲು ಬರುವದಿಲ್ಲ.

i) ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡಿರುವ ಅಪರಾಧಕ್ಕಾಗಿ ಸಿದ್ಧದೋಷಿಯಾಗಿರುವಲ್ಲಿ ಅಥವಾ

ii) ಬಿಡುಗಡೆಗೊಳ್ಳದ ದಿವಾಳಿಕೋರನಾಗಿದ್ದರೆ ಅಥವಾ

iii) ಅಸ್ವಸ್ಥ ಮನಸ್ಸಿನವನಾಗಿದ್ದು, ಅರ್ಹನ್ಯಾಯಾಲಯ ಹಾಗೆ ಅವನನ್ನು ಘೋಷಿಸಿದ್ದರೆ ಅಥವಾ

iv) ಸರ್ಕಾರದ ಅಥವಾ ಸರ್ಕಾರದ ಒಡೆತನದ ನಿಗಮ ಅಥವಾ ಸರ್ಕಾರ ನಿಯಂತ್ರಣದಲ್ಲಿರುವ ಕಂಪನಿಯಿಂದ ತೆಗೆದು ಹಾಕಲ್ಪಟ್ಟಿದ್ದರೆ ಅಥವಾ ಅಮಾನತುಗೊಂಡಿದ್ದರೆ ಅಥವಾ

v) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅವನು ಸದಸ್ಯನಾಗಿ ನಿಷ್ಪಕ್ಷಪಾತವಾಗಿ ನಿರ್ಣಯಗಳನ್ನು ತಕ್ಕೊಳ್ಳುವದಕ್ಕೆ ಅಡ್ಡಿಯಾಗುವಂತಹ ಆಸಕ್ತಿಯನ್ನು ಹೊಂದಿದ್ದರೆ ಅಥವಾ

vi) ರಾಜ್ಯಸರ್ಕಾರ ಸೂಚಿಸುವ ಯಾವುದೇ ಅನರ್ಹತೆಗಳನ್ನು ಹೊಂದಿದ್ದರೆ, ಅವರು ವೇದಿಕೆಯ ಸದಸ್ಯರಾಗಲು ಅರ್ಹರಲ್ಲ.

### • ಜಿಲ್ಲಾ ವೇದಿಕೆಯ ಅಧಿಕಾರವ್ಯಾಪ್ತಿ (ಪರಿಚ್ಛೇದ 11)

(Jurisdiction of the District Forum)

1. ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ಕ್ಲೇಮು ಮಾಡಿದ ಸರಕುಗಳ ಅಥವಾ ಸೇವೆಗಳ ಮೌಲ್ಯವು ಮತ್ತು ಪರಿಹಾರಧನವು, ಯಾವುದಾದರೂ ಇದ್ದರೆ, ಇಪ್ಪತ್ತು ಲಕ್ಷ ರೂಪಾಯಿಗಳಿಗೆ ಮೀರದಿರುವಂಥ ಫಿರ್ಯಾದುಗಳನ್ನು ಪುರಸ್ಕರಿಸಲು ಜಿಲ್ಲಾ ವೇದಿಕೆಗೆ ಅಧಿಕಾರ ವ್ಯಾಪ್ತಿ ಇರತಕ್ಕದು.

2. ಯಾವ ಜಿಲ್ಲಾ ವೇದಿಕೆಯ ಅಧಿಕಾರ ವ್ಯಾಪ್ತಿ ಸ್ಥಳೀಯ ಪರಿಮಿತಿಯಲ್ಲಿ,

ಎ) ಎದುರಪಕ್ಷವು ಅಥವಾ ಅವು ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವಲ್ಲಿ ಅವರಲ್ಲಿ ಪ್ರತಿಯೊಬ್ಬರು, ಫಿರ್ಯಾದನ್ನು–ಹಾಜರುಪಡಿಸುವ ಸಮಯದಲ್ಲಿ ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಶಾಖಾ ಕಚೇರಿ ಇರುವ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕಾರ್ಯ ಮಾಡುತ್ತಿರುವಲ್ಲಿ; ಅಥವಾ

ಬಿ) ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಎದುರು ಪಕ್ಷದವರಿರುವಲ್ಲಿ ಅವರಲ್ಲಿ ಯಾರೇ ಒಬ್ಬ ಪಕ್ಷದವರು ಫಿರ್ಯಾದನ್ನು ಹಾಜರುಪಡಿಸುವ ಸಮಯದಲ್ಲಿ ವಾಸ್ತವವಾಗಿ ಮತ್ತು ಸ್ವಇಚ್ಛೆಯಿಂದ ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಶಾಖಾ ಕಚೇರಿ ಹೊಂದಿರುವ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕಾರ್ಯಮಾಡುತ್ತಿರುವಲ್ಲಿ ಆದರೆ ಅಂಥ ಸಂದರ್ಭದಲ್ಲಿ ಎದುರು ಪಕ್ಷದವರು ವಾಸ ಮಾಡದಿರುವಲ್ಲಿ ಅಥವಾ

Scanned with CamScanner

ಸಂದರ್ಭಾನುಸಾರ ವ್ಯವಹಾರ ನಡೆಸುತ್ತಿರುವಲ್ಲಿ ಅಥವಾ ಶಾಖಾ ಕಚೇರಿ ಹೊಂದಿರದಿರುವಲ್ಲಿ ಅಥವಾ ಲಾಭಕ್ಕಾಗಿ ವೈಯಕ್ತಿಕವಾಗಿ ಕಾರ್ಯಮಾಡದಿರುವಲ್ಲಿ ನ್ಯಾಯಾಲಯದ ಅನುಮತಿಯಿಂದ ಅಥವಾ ಹಾಗೆ ಹಾಜರುಪಡಿಸುವಿಕೆಗೆ ಮೌನ ಸಮ್ಮತಿ ನೀಡಿದಾಗ ಅಥವಾ

ಸಿ) ವ್ಯಾಜ್ಯ ಕಾರಣವು ಇಡಿಯಾಗಿ ಅಥವಾ ಭಾಗಶಃ ಉಂಟಾಗುವಲ್ಲಿ ಫಿರ್ಯಾದನ್ನು ಆ ಜಿಲ್ಲಾ ವೇದಿಕೆಯಲ್ಲಿ ಸಲ್ಲಿಸತಕ್ಕದು.

ಉದಾಹರಣೆಗಾಗಿ – **Dynavox Electronic Private Limited v/s B.J.S. Rampuria Jain College, Bikaner** ಈ ಪ್ರಕರಣದಲ್ಲಿ ಒಂದು ಒಪ್ಪಂದದಂತೆ ಯಂತ್ರೋಪಕರಣವನ್ನು ಪೂರೈಸಿ, ಒಂದು ಸ್ಥಳದಲ್ಲಿ ಸ್ಥಾಪಿಸಲಾಗಿತ್ತು, ಆದ್ದರಿಂದ ಅದಕ್ಕೆ ಸಂಬಂಧಿಸಿದ ವ್ಯಾಜ್ಯದ ಕಾರಣವು ಅದೇ ಸ್ಥಳದಲ್ಲಿ ಉದ್ಭವಿಸಿದೆಯೆಂದು ತಿಳಿಯಬೇಕು. ಆ ಯಂತ್ರೋಪಕರಣ ಸ್ಥಾಪಿಸಿದ ಜಿಲ್ಲಾ ವೇದಿಕೆಯಲ್ಲಿ ದೂರು ದಾಖಲಿಸಬೇಕು.

## • ಫಿರ್ಯಾದನ್ನು ಹಾಜರುಪಡಿಸತಕ್ಕ ವಿಧಾನ (ಪರಿಚ್ಛೇದ 12)

(Manner in which the complaint shall be made)

1. ಮಾರಾಟ ಮಾಡಿದ ಅಥವಾ ವಶಾವಣೆ ಮಾಡಿದ ಅಥವಾ ಮಾರಾಟ ಮಾಡಲು ಅಥವಾ ವಶಾವಣೆ ಮಾಡಲು ಒಪ್ಪಿದ ಯಾವುದೇ ಸರಕುಗಳಿಗೆ ಅಥವಾ ಒದಗಿಸಲಾದ ಅಥವಾ ಒದಗಿಸಲು ಒಪ್ಪಲಾದ ಯಾವುದೇ ಸೇವೆಗೆ ಸಂಬಂಧಿಸಿದಂತೆ ಫಿರ್ಯಾದನ್ನು –

ಎ) ಅಂಥ ಸರಕುಗಳನ್ನು ಯಾವ ಗ್ರಾಹಕನಿಗೆ ಮಾರಾಟ ಮಾಡಲಾಗಿದೆಯೋ ಅಥವಾ ವಶಾವಣೆ ಮಾಡಲಾಗಿದೆಯೋ ಅಥವಾ ಮಾರಾಟ ಮಾಡಲು ಅಥವಾ ವಶಾವಣೆ ಮಾಡಲು ಒಪ್ಪಲಾಗಿದೆಯೇ ಅಥವಾ ಸೇವೆಯನ್ನು ಒದಗಿಸಲಾಗಿದೆಯೋ ಅಥವಾ ಒದಗಿಸಲು ಒಪ್ಪಲಾಗಿದೆಯೋ ಅತನು.

ಬಿ) ಯಾವ ಗ್ರಾಹಕನಿಗೆ ಸರಕುಗಳನ್ನು ಮಾರಾಟ ಮಾಡಲಾಗಿದೆಯೋ ಅಥವಾ ವಶಾವಣೆ ಮಾಡಲಾಗಿದೆಯೋ ಅಥವಾ ಮಾರಾಟ ಮಾಡಲು ಅಥವಾ ವಶಾವಣೆ ಮಾಡಲು ಒಪ್ಪಲಾಗಿದೆಯೋ ಅಥವಾ ಸೇವೆಯನ್ನು ಒದಗಿಸಲಾಗಿದೆಯೋ ಅಥವಾ ಒದಗಿಸಲು ಒಪ್ಪಲಾಗಿದೆಯೋ ಆ ಗ್ರಾಹಕನು ಒಂದು ಮನ್ನಣೆ ಪಡೆದು ಸಂಘದ ಸದಸ್ಯನಾಗಿರಲಿ ಅಥವಾ ಸದಸ್ಯನಾಗದೆ ಇರಲಿ, ಮನ್ನಣೆಪಡೆದ ಒಂದು ಗ್ರಾಹಕರ ಸಂಘ.

ಸಿ) ಒಂದೇ ಹಿತಾಸಕ್ತಿಯುಳ್ಳ ಹಲವಾರು ಗ್ರಾಹಕರಿರುವಲ್ಲಿ, ಹಾಗೆ ಹಿತಾಸಕ್ತಿಯುಳ್ಳ ಎಲ್ಲ ಗ್ರಾಹಕರ ಪರವಾಗಿ ಅಥವಾ ಅವರ ಪ್ರಯೋಜನಕ್ಕಾಗಿ ಜಿಲ್ಲಾ ವೇದಿಕೆಯ ಅನುಮತಿಯಿಂದ ಒಬ್ಬ ಅಥವಾ ಹೆಚ್ಚಿನ ಸಂಖ್ಯೆಯ ಗ್ರಾಹಕರು; ಅಥವಾ

ಡಿ) ಕೇಂದ್ರ ಅಥವಾ ರಾಜ್ಯ ಸರಕಾರ ಜಿಲ್ಲಾ ವೇದಿಕೆಗೆ ಸಲ್ಲಿಸತಕ್ಕದು.

2. ಉಪ ಪರಿಚ್ಛೇದ (ಫ)ದಡಿಯಲ್ಲಿ ದೂರನ್ನು ಸಲ್ಲಿಸಿದ್ದರೆ, ಅಂತಹ ದೂರು ಸೂಚಿಸಿದ ಶುಲ್ಕವನ್ನು ಸೂಚಿಸಿದ ವಿಧಾನದಲ್ಲಿ ಪಾವತಿಸಿರಬೇಕು.

Scanned with CamScanner

3. ಈ ರೀತಿಯಾಗಿ ದೂರನ್ನು ಸ್ವೀಕರಿಸಿದ ನಂತರ, ಜಿಲ್ಲಾ ವೇದಿಕೆಯು ಆ ಪ್ರಕಾರ ಮುನ್ನ ಆಯುವಂತೆ ಅಥವಾ ಅದನ್ನು ತಿರಸ್ಕರಿಸಲು ಆದೇಶಿಸುವುದು. ಆದರೆ, ದೂರು ನೀಡಿದ ವ್ಯಕ್ತಿಗೆ ವಿವರಣೆ ಕೇಳುವ ಸುಸಂಧಿಯನ್ನು ನೀಡದೆಯೆ ನಿರ್ಧಾರ ಮಾಡಬೇಕು.

4. ದೂರನ್ನು ಮುಂದುವರೆಸಬೇಕೆಂದು ನಿರ್ಣಯಿಸಿದಾಗ, ಈ ಕಾನೂನು ಅಡಿಯಲ್ಲಿ ಸೂಚಿಸಿದ ವಿಧಾನದಂತೆ ಅದರ ಮುಂದಿನ ಕ್ರಮಕೈಕೊಳ್ಳಬೇಕು.

ಒಮ್ಮೆ ದೂರನ್ನು ವೇದಿಕೆಯು ಮುಂದುವರೆಸಲು ಒಪ್ಪಿಕೊಂಡಾಗ, ಅದನ್ನು ಇನ್ನಾವುದೇ ನ್ಯಾಯಾಲಯಕ್ಕೆ ಅಥವಾ ಯಾವುದೇ ಅಧಿಕಾರಿಗಳಿಗೆ ಅಥವಾ ಟ್ರಿಬುನಲ್‌ಗೆ ವರ್ಗಾಯಿಸಲು ಬರುವದಿಲ್ಲ.

- **ಫಿರ್ಯಾದನ್ನು ಸ್ವೀಕರಿಸಿದ ಅನಂತರ ಪ್ರಕ್ರಿಯೆ (ಪರಿಚ್ಛೇದ 13)**

(Procedure on receipt of complaint)

1. ಜಿಲ್ಲಾ ವೇದಿಕೆಯು ಫಿರ್ಯಾದನ್ನು ಸ್ವೀಕರಿಸಿದ ಅನಂತರ, ಫಿರ್ಯಾದು ಯಾವುದೇ ಸರಕುಗಳಿಗೆ ಸಂಬಂಧಿಸಿದ್ದರೆ,

ಎ) ಆ ಫಿರ್ಯಾದಿನ ಪ್ರತಿಯನ್ನು ಫಿರ್ಯಾದಿನಲ್ಲಿ ಉಲ್ಲೇಖಿಸಲಾದ ಎದುರು ಪಕ್ಷದವರಿಗೆ, ಆ ಪ್ರಕರಣದ ಬಗ್ಗೆ ತಮ್ಮ ಹೇಳಿಕೆಯನ್ನು ಮೂವತ್ತು ದಿವಸಗಳೊಳಗಾಗಿ ಅಥವಾ ಜಿಲ್ಲಾ ವೇದಿಕೆಯು ಅನುಮತಿಸಿದ ಹದಿನೈದು ದಿನಗಳನ್ನು ಮೀರದ ಹೆಚ್ಚಿನ ಅವಧಿಯಲ್ಲಿ ಸಲ್ಲಿಸಲು ನಿರ್ದೇಶಿಸಿ ಕಳಿಸಬೇಕು.

ಬಿ) (ಎ) ವಾಕ್ಯಾವಳಿಯ ಮೇರೆಗೆ ತನಗೆ ಕಳಿಸಲಾದ ಫಿರ್ಯಾದನ್ನು ಸ್ವೀಕರಿಸಿದ ನಂತರ ಎದುರು ಪಕ್ಷದವರು ಫಿರ್ಯಾದಿನಲ್ಲಿ ಮಾಡಲಾದ ಹೇಳಿಕೆಗಳನ್ನು ಅಲ್ಲಗಳೆದರೆ ಅಥವಾ ವಿವಾದಿಸಿದರೆ ಅಥವಾ ಜಿಲ್ಲಾವೇದಿಕೆಯು ಅನುಮತಿಸಿದ ಅವಧಿಯಲ್ಲಿ ತನ್ನ ವಾದವನ್ನು ಪ್ರತಿನಿಧಿಸಿ ಯಾವುದೇ ಕ್ರಮವನ್ನು ಕೈಕೊಳ್ಳುವುದನ್ನು ಬಿಟ್ಟರೆ ಅಥವಾ ವಿಫಲನಾದರೆ, ಜಿಲ್ಲಾ ವೇದಿಕೆಯು (ಸಿ) ಇಂದ (ಜಿ) ವಾಕ್ಯಾವಳಿಗಳಲ್ಲಿ ಹೇಳಿದ ವಿಧಾನದಲ್ಲಿ ಗ್ರಾಹಕರ ವಿವಾದವನ್ನು ಇತ್ಯರ್ಥಪಡಿಸಲು ಮುಂದುವರಿಯತಕ್ಕದು.

ಸಿ) ಫಿರ್ಯಾದಿನಲ್ಲಿ ಸರಕುಗಳಲ್ಲಿನ ನ್ಯೂನ್ಯತೆಯನ್ನು ಆಪಾದಿಸಲಾಗಿರುವಲ್ಲಿ ಮತ್ತು ಅದನ್ನು ಆ ಸರಕುಗಳ ಸಮುಚಿತ ವಿಶ್ಲೇಷಣೆಯಿಂದ ಅಥವಾ ಪರೀಕ್ಷೆಯಿಂದ ನಿರ್ಧರಿಸ ಲಾಗದಿರುವಲ್ಲಿ, ಫಿರ್ಯಾದುದಾರನಿಂದ ಆ ಸರಕಿನ ಸ್ಯಾಂಪಲ್ಲನ್ನು ಜಿಲ್ಲಾ ವೇದಿಕೆಯು ಪಡೆದುಕೊಳ್ಳತಕ್ಕದು ಮತ್ತು ಅದನ್ನು ಸೀಲು ಮಾಡತಕ್ಕದು ಮತ್ತು ಗೊತ್ತುಪಡಿಸಿದ ರೀತಿಯಲ್ಲಿ ಅಧಿಕೃತಗೊಳಿಸತಕ್ಕದು ಮತ್ತು ಹಾಗೆ ಸೀಲು ಮಾಡಿದ ಸ್ಯಾಂಪಲ್ಲನ್ನು, ಅದು ಫಿರ್ಯಾದಿನಲ್ಲಿ ಆಪಾದಿಸಲಾದ ನ್ಯೂನ್ಯತೆಯನ್ನು ಅಥವಾ ಇತರ ಯಾವುದೇ ನ್ಯೂನ್ಯತೆಯನ್ನು ಹೊಂದಿರುತ್ತದೆಯೋ ಅನ್ನುವುದನ್ನು ಕಂಡುಹಿಡಿಯಲು ಅದನ್ನು ವಿಶ್ಲೇಷಿಸಲು ಅಥವಾ ಪರೀಕ್ಷಿಸಲು ಯಾವುದು ಅವಶ್ಯವೋ ಅದನ್ನು ಮಾಡಲು ಮತ್ತು ಆ ಬಗ್ಗೆ ತನ್ನ ವರದಿಯನ್ನು ಪ್ರಯೋಗ ಶಾಲೆಯು ತಾನು ಉಲ್ಲೇಖವನ್ನು ಪಡೆದ ನಲವತ್ತೈದು ದಿವಸಗಳಲ್ಲಿ ಅಥವಾ ಜಿಲ್ಲಾ

Scanned with CamScanner

ವೇದಿಕೆಯು ವಿಸ್ತರಿಸಿದಂಥ ಅವಧಿಯಲ್ಲಿ ಜಿಲ್ಲಾ ವೇದಿಕೆಗೆ ಸಲ್ಲಿಸುವಂತೆ ನಿರ್ದೇಶಿಸಿ ಸಮುಚಿತ ಪ್ರಯೋಗ ಶಾಲೆಗೆ ಕಳುಹಿಸತಕ್ಕದು.

ಡಿ) ಜಿಲ್ಲಾ ವೇದಿಕೆಯು (ಸಿ) ವಾಕ್ಯಾವಳಿಯ ಮೇರೆಗೆ ಯಾವುದೇ ಸಮುಚಿತ ಪ್ರಯೋಗ ಶಾಲೆಗೆ ಸರಕಿನ ಸ್ಯಾಂಪಲ್ಲನ್ನು ಕಳಿಸಿಕೊಡುವ ಪೂರ್ವದಲ್ಲಿ, ಸಂಬಂಧಿಸಿದ ಸರಕುಗಳ ವಿಶ್ಲೇಷಣೆಯನ್ನು ಅಥವಾ ಪರೀಕ್ಷೆಯನ್ನು ಮಾಡಲು ಸಮುಚಿತ ಪ್ರಯೋಗ ಶಾಲೆಗೆ ಸಂದಾಯ ಮಾಡಲು ಗೊತ್ತುಪಡಿಸಲಾದಂಥ ಶುಲ್ಕವನ್ನು ವೇದಿಕೆಯ ಹೆಸರಿನಲ್ಲಿ ಠೇವಣಿ ಇಡಬೇಕೆಂದು ಫಿರ್ಯಾದುದಾರನ್ನು ಅಗತ್ಯಪಡಿಸಬಹುದು.

ಇ) ಜಿಲ್ಲಾ ವೇದಿಕೆಯು (ಡಿ) ವಾಕ್ಯಾವಳಿಯ ಮೇರೆಗೆ ತನ್ನ ಹೆಸರಿನಲ್ಲಿ ಇಡಲಾದ ಹಣವನ್ನು (ಸಿ) ವಾಕ್ಯಾವಳಿಯಲ್ಲಿ ಉಲ್ಲೇಖಿಸಲಾದ ವಿಶ್ಲೇಷಣೆಯನ್ನು ಅಥವಾ ಪರೀಕ್ಷೆಯನ್ನು ನಡೆಸಲು ಸಮರ್ಥವಾಗುವಂತೆ ಮಾಡಲು ಸಮುಚಿತ ಪ್ರಯೋಗ ಶಾಲೆಗೆ ಕಳಿಸತಕ್ಕದು ಮತ್ತು ಸಮುಚಿತ ಪ್ರಯೋಗ ಶಾಲೆಯಿಂದ ವರದಿ ಬಂದ ನಂತರ ಜಿಲ್ಲಾ ವೇದಿಕೆಯು ತಾನು ಸಮುಚಿತವೆಂದು ಭಾವಿಸುವಂಥ ಷರಾದೊಂದಿಗೆ ವರದಿಯ ಪ್ರತಿಯನ್ನು ಎದುರು ಪಕ್ಷದವರಿಗೆ ಕಳಿಸತಕ್ಕದು.

ಎಫ್) ಸಮುಚಿತ ಪ್ರಯೋಗಶಾಲೆಯ ನಿರ್ಣಯಗಳ ಸರಿತನ (Correctness)ವನ್ನು ಯಾವುದೇ ಪಕ್ಷದವರು ವಿವಾದಿಸಿದರೆ ಅಥವಾ ಸಮುಚಿತ ಪ್ರಯೋಗ ಶಾಲೆಯು ವಿಶ್ಲೇಷಣೆಗೆ ಅಥವಾ ಪರೀಕ್ಷೆಗೆ ಅಳವಡಿಸಿದ ವಿಧಾನಗಳ ಸರಿತನವನ್ನು ವಿವಾದಿಸಿದರೆ, ಜಿಲ್ಲಾ ವೇದಿಕೆಯು, ಸಮುಚಿತ ಪ್ರಯೋಗ ಶಾಲೆಯು ಮಾಡಿದ ವರದಿಗೆ ಸಂಬಂಧಿಸಿದಂತೆ ಲಿಖಿತದಲ್ಲಿ ತಕರಾರುಗಳನ್ನು ಸಲ್ಲಿಸುವಂತೆ ಎದುರು ಪಕ್ಷವನ್ನು ಅಥವಾ ಫಿರ್ಯಾದುದಾರನನ್ನು ಅಗತ್ಯಪಡಿಸಬಹುದು.

ಜಿ) ಆ ನಂತರ ಜಿಲ್ಲಾ ವೇದಿಕೆಯು ಫಿರ್ಯಾದದಾರನಿಗೆ ಅದರಂತೆ ಎದುರು ಪಕ್ಷದವರಿಗೂ ಸಮುಚಿತ ಪ್ರಯೋಗ ಶಾಲೆಯವರು ಮಾಡಿದ ವರದಿಯ ಸರಿತನಕ್ಕೆ ಅಥವಾ ಅನ್ಯಥಾ ಸಂಬಂಧಿಸಿದಂತೆ ಮತ್ತು

ಎಫ್) ವಾಕ್ಯಾವಳಿಯ ಮೇರೆಗೆ ಸಲ್ಲಿಸಲಾದ ತಕರಾರುಗಳಿಗೆ ಸಂಬಂಧಿಸಿದಂತೆ ವಾದಿಸಲು ಯುಕ್ತ ಅವಕಾಶವನ್ನು ಕೊಡತಕ್ಕದು ಮತ್ತು 14 ನೇ ಕಲಮಿನ ಮೇರೆಗೆ ಸಮುಚಿತ ಆದೇಶವನ್ನು ಮಾಡತಕ್ಕದು.

2. ಜಿಲ್ಲಾ ವೇದಿಕೆಯು, ತಾನು 12 ನೇ ಕಲಮಿನ ಮೇರೆಗೆ ಸ್ವೀಕರಿಸಿದ ಫಿರ್ಯಾದಿಯು (1) ನೇ ಉಪ ಕಲಮಿನಲ್ಲಿ ಗೊತ್ತುಪಡಿಸಿದ ಪ್ರಕ್ರಿಯೆಯನ್ನು ಅನುಸರಿಸಲು ಬಾರದಿರುವಂಥ ಸರಕುಗಳಿಗೆ ಸಂಬಂಧಪಟಟ್ಟಿದ್ದರೆ, ಅಥವಾ ಫಿರ್ಯಾದಿಯು ಯಾವುದೇ ಸೇವೆಗೆ ಸಂಬಂಧಪಟ್ಟಿದ್ದರೆ–

ಎ) ಅಂಥ ಫಿರ್ಯಾದಿನ ಪ್ರತಿಯನ್ನು ಎದುರು ಪಕ್ಷದವರಿಗೆ, ಆ ಬಗ್ಗೆ ಪ್ರಕರಣದ ಬಗ್ಗೆ ತಮ್ಮ ಹೇಳಿಕೆಯನ್ನು ಮೂವತ್ತು ದಿವಸದೊಳಗಾಗಿ ಅಥವಾ ಜಿಲ್ಲಾ ವೇದಿಕೆಯು ಅನುಮತಿಸಿದ ಹದಿನೈದು ದಿನಗಳನ್ನು ಮೀರದ ಹೆಚ್ಚಿನ ಅವಧಿಯಲ್ಲಿ ಸಲ್ಲಿಸಲು ನಿರ್ದೇಶಿಸಿ ಕಳಿಸಬೇಕು.

Scanned with CamScanner

ಬಿ) (ಎ) ವಾಕ್ಯಾವಳಿಯ ಮೇರೆಗೆ ತಮಗೆ ಕಳಿಸಲಾದ ಫಿರ್ಯಾದನ್ನು ಸ್ವೀಕರಿಸಿದ ನಂತರ ಎದುರು ಪಕ್ಷದವರು ಫಿರ್ಯಾದಿನಲ್ಲಿ ಮಾಡಲಾದ ಹೇಳಿಕೆಗಳನ್ನು ಅಲ್ಲಗಳೆದರೆ ಅಥವಾ ವಿವಾದಿಸಿದರೆ ಅಥವಾ ಜಿಲ್ಲಾ ವೇದಿಕೆಯು ಅನುಮತಿಸಿದ ಅವಧಿಯಲ್ಲಿ ತನ್ನ ವಾದವನ್ನು ಪ್ರತಿನಿಧಿಸಿ ಯಾವುದೇ ಕ್ರಮವನ್ನು ಕೈಕೊಳ್ಳುವುದನ್ನು ಬಿಟ್ಟರೆ ಅಥವಾ ವಿಫಲನಾದರೆ ಜಿಲ್ಲಾ ವೇದಿಕೆಯು ಗ್ರಾಹಕರ ವಿವಾದವನ್ನು

a) ಫಿರ್ಯಾದು ಒಳಗೊಂಡಿರುವ ಆಪಾದನೆಗಳನ್ನು ಎದುರು ಪಕ್ಷದವರು ಅಲ್ಲಗಳೆಯುವಲ್ಲಿ ಅಥವಾ ವಿವಾದಿಸುವಲ್ಲಿ ಫಿರ್ಯಾದುದಾರನು ಮತ್ತು ಎದುರು ಪಕ್ಷದವರು ತನ್ನ ಗಮನಕ್ಕೆ ತಂದ ಸಾಕ್ಷ್ಯವನ್ನು ಆಧರಿಸಿ; ಅಥವಾ.

b) ವೇದಿಕೆಯು ಕೊಟ್ಟ ಅವಧಿಯಲ್ಲಿ ಎದುರು ಪಕ್ಷದವನು ಯಾವುದೇ ಕ್ರಮ ಕೈಕೊಳ್ಳುವುದನ್ನು ಬಿಟ್ಟರೆ ಅಥವಾ ವಿಫಲನಾದರೆ ಫಿರ್ಯಾದುದಾರನು ತನ್ನ ಗಮನಕ್ಕೆ ತಂದ ಸಾಕ್ಷ್ಯವನ್ನು ಧರಿಸಿ–ಇತ್ಯರ್ಥಪಡಿಸಲು ಮುಂದುವರೆಯತಕ್ಕದು.

3. (1) ನೇ ಮತ್ತು (2) ನೇ ಉಪಕಲಮುಗಳಲ್ಲಿ ಗೊತ್ತುಪಡಿಸಿದ ಪ್ರಕ್ರಿಯೆಯನ್ನು ಪಾಲಿಸುವ ಯಾವುದೇ ವ್ಯವಹರಣೆಗಳನ್ನು ಸ್ವಾಭಾವಿಕ ನ್ಯಾಯದಾನದ ತತ್ವಗಳನ್ನು (Principles of natural justice) ಪಾಲಿಸಿಲ್ಲ ಎಂಬ ಆಧಾರದ ಮೇಲೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದಲ್ಲ.

4. ಈ ಕಲಮಿನ ಉದ್ದೇಶಗಳಿಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908 ರ 5)ರ ಮೇರೆಗೆ ಸಿವಿಲ್ ದಾವೆಯ ಅಧಿವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲ ಅಧಿಕಾರಗಳೂ ಈ ಕೆಳಗೆ ಹೇಳಲಾಗಿರುವ ವಿಷಯಗಳಿಗೆ ಸಂಬಂಧಿಸಿದಂತೆ ಇರತಕ್ಕದು. ಅಂದರೆ –

i) ಯಾವುದೇ ಪ್ರತಿವಾದಿಗೆ ಅಥವಾ ಸಾಕ್ಷಿದಾರನಿಗೆ ಸಮನ್ಸು ಹೊರಡಿಸಲು ಮತ್ತು ಆತನ ಹಾಜರಾತಿಯನ್ನು ಒತ್ತಾಯಪಡಿಸಲು ಮತ್ತು ಸಾಕ್ಷಿದಾರನನ್ನು ಪ್ರಮಾಣದ ಮೇಲೆ ವಿಚಾರಿಸಲು;

ii) ಶೋಧನೆ ಮತ್ತು ಸಾಕ್ಷ್ಯವಾಗಿ ಹಾಜರು ಪಡಿಸಬಹುದಾದ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವುದಿಲ್ಲ.

iii) ಪ್ರಮಾಣ ಪತ್ರದ ರೂಪದಲ್ಲಿ ಸಾಕ್ಷ್ಯವನ್ನು ಸ್ವೀಕರಿಸುವುದು.

iv) ಸಮುಚಿತ ಪ್ರಯೋಗ ಶಾಲೆಯಿಂದ ಅಥವಾ ಇತರ ಯಾವುದೇ ಸುಸಂಬದ್ಧ ಮೂಲದಿಂದ ಸಂಬಂಧಪಟ್ಟ ವಿಶ್ಲೇಷಣೆಯ ಅಥವಾ ಪರೀಕ್ಷೆಯ ವರದಿಯನ್ನು ತರಿಸಿಕೊಳ್ಳುವುದು.

v) ಯಾವುದೇ ಸಾಕ್ಷಿದಾರನ ಪರೀಕ್ಷೆಗಾಗಿ ಆಯೋಗವನ್ನು ರಚಿಸುವದು ; ಮತ್ತು

vi) ಗೊತ್ತುಪಡಿಸಬಹುದಾದ ಇತರ ಯಾವುದೇ ವಿಷಯ.

ಉದಾಹರಣೆಗಾಗಿ **Om Prakash Mathur v/s Indian Rayon Industries Limited(1992) I CPJ 44.** ಈ ಪ್ರಕರಣದಲ್ಲಿ ರಾಷ್ಟ್ರೀಯ ಆಯೋಗ

ತೀರ್ಮಾನಿಸಿದ್ದೇನೆಂದರೆ, ಜಿಲ್ಲಾ ವೇಧಿಕೆಯ ಮುಂದೆ ವಿವಾದದ ವಿಚಾರಣೆಯಾಗಿರಲಿಲ್ಲ, ಆದ್ದರಿಂದ ಅದು ಮೇಲಿನ ವಿಧಾನದಂತೆ ಪರೀಕ್ಷೆಗೆ ಒಳಪಡಬೇಕಾಗಿಲ್ಲ.

ನೈಸರ್ಗಿಕ ನ್ಯಾಯ ಪಾಲನೆಯಾಗಿಲ್ಲವೆಂಬ ಕಾರಣದಿಂದ ಜಿಲ್ಲಾ ವೇದಿಕೆಯ ನಡಾವಳಿಕೆಯನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಲು ಬರುವದಿಲ್ಲ.

ಜಿಲ್ಲಾ ವೇದಿಕೆಯ ಸಮಕ್ಷಮ ನಡೆದಂತಹ ಎಲ್ಲ ನಡಾವಳಿಕೆಯು ನ್ಯಾಯಾಂಗ ವಿಚಾರಣೆಯೆಂದು ಪರಿಗಣಿಸಲಾಗುವದು, ಈ ನಿಟ್ಟಿನಲ್ಲಿ ವೇದಿಕೆಯನ್ನು ನಾಗರಿಕ ನ್ಯಾಯಲಯವೆಂದು ತಿಳಿಯಾಲಾಗುತ್ತದೆ. (ಪರಿಚ್ಛೇದ 13)

ಪ್ರತಿಯೊಂದು ನಡಾವಳಿಕೆಯನ್ನು ಅಧ್ಯಕ್ಷ ಮತ್ತು ಕನಿಷ್ಠ ಒಬ್ಬ ಸದಸ್ಯರು ಸೇರಿ ನಡೆಸಬೇಕು. ಒಂದು ವೇಳೆ ಯಾವುದೋ ಕಾರಣಕ್ಕಾಗಿ ಸದಸ್ಯನು ಇಡೀ ನಡಾವಳಿಕೆ ಪೂರ್ತಿಗೊಳ್ಳುವವರೆಗೆ ಉಪಸ್ಥಿತನಿರಲು ಸಾಧ್ಯವಾಗದಿದ್ದರೆ, ಅಧ್ಯಕ್ಷರು ಮತ್ತೊಬ್ಬ ಸದಸ್ಯರ ಉಪಸ್ಥಿತಿಯತಿಯಲ್ಲಿ ನಡಾವಳಿಕೆಯನ್ನು ಹೊಸದಾಗಿ (de novo) ಪ್ರಾರಂಭಿಸಬೇಕು.

ವೇದಿಕೆ ಪಾಸು ಮಾಡಿದ ಆದೇಶವು ಅಧ್ಯಕ್ಷರಿಂದ ಮತ್ತು ನಡಾವಳಿಕೆಯಲ್ಲಿ ಹಾಜರಿದ್ದ ಸದಸ್ಯರ ಸಹಿಯನ್ನು ಹೊಂದಿರಬೇಕು. ಅಧ್ಯಕ್ಷ ಮತ್ತು ಸದಸ್ಯರು ಯಾವುದೇ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೆ, ಅದನ್ನು ಮತ್ತೊಬ್ಬ ಸದಸ್ಯರಿಗೆ ವಹಿಸಬೇಕು. ಒಟ್ಟು ಸದಸ್ಯರಲ್ಲಿ ಬಹುಮತ ಅಭಿಪ್ರಾಯದ ಪ್ರಕಾರ ನಿರ್ಣಯ ಕೈಕೊಳ್ಳಲಾಗುವುದು.

## ಜಿಲ್ಲಾ ವೇದಿಕೆಯ ಅಧಿಕಾರಗಳು (Powers of District Forum)

ಸಿವಿಲ್ ಪ್ರಕ್ರಿಯಾ ಸಂಹಿತೆ 1908 ರ ಮೇರೆಗೆ ಸಿವಿಲ್ ದಾವೆಯ ವಿಚಾರಣೆಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರುವ ಎಲ್ಲ ಅಧಿಕಾರಗಳು ಜಿಲ್ಲಾ ವೇದಿಕೆಗೆ ಇದೆ.

i) ಯಾವುದೇ ಪ್ರತಿವಾದಿಗೆ ಅಥವಾ ಸಾಕ್ಷಿದಾರನಿಗೆ ಸಮನು ಹೊರಡಿಸಲು ಮತ್ತು ಆತನ ಹಾಜರಾತಿಯನ್ನು ಒತ್ತಾಯಪಡಿಸಲು ಮತ್ತು ಸಾಕ್ಷಿದಾರ ನನ್ನು ಪ್ರಮಾಣದ ಮೇಲೆ ವಿಚಾರಿಸಲು;

ii) ಶೋಧನೆ ಮತ್ತು ಸಾಕ್ಷ್ಯವಾಗಿ ಹಾಜರು ಪಡಿಸಬಹುದಾದ ಯಾವುದೇ ದಸ್ತಾವೇಜನ್ನು ಅಥವಾ ಇತರ ವಸ್ತುವನ್ನು ಹಾಜರುಪಡಿಸುವುದಿಲ್ಲ.

iii) ಪ್ರಮಾಣ ಪತ್ರದ ರೂಪದಲ್ಲಿ ಸಾಕ್ಷ್ಯವನ್ನು ಸ್ವೀಕರಿಸುವುದು.

iv) ಸಮುಚಿತ ಪ್ರಯೋಗ ಶಾಲೆಯಿಂದ ಅಥವಾ ಇತರ ಯಾವುದೇ ಸುಸಂಬದ್ಧ ಮೂಲದಿಂದ ಸಂಬಂಧಪಟ್ಟ ವಿಶ್ಲೇಷಣೆಯ ಅಥವಾ ಪರೀಕ್ಷೆಯ ವರದಿಯನ್ನು ತರಿಸಿಕೊಳ್ಳುವುದು.

v) ಯಾವುದೇ ಸಾಕ್ಷಿದಾರನ ಪರೀಕ್ಷೆಗಾಗಿ ಆಯೋಗವನ್ನು ರಚಿಸುವದು ; ಮತ್ತು

vi) ಗೊತ್ತುಪಡಿಸಬಹುದಾದ ಇತರ ಯಾವುದೇ ವಿಷಯ.

## ಅಪೀಲು ಸುನಾವಣೆಗೆ ಪ್ರಕ್ರಿಯೆ (ನಿಯಮ 15)

(Procedure for hearing the appeal)

1) ಅಪೀಲುದಾರನು ಅಥವಾ ಆತನ ಏಜೆಂಟನು ವೈಯಕ್ತಿಕವಾಗಿ ಅಥವಾ ಆಯೋಗದ

Scanned with CamScanner

ವಿಳಾಸಕ್ಕೆ ರಜಿಸ್ಟರ್ಡ ಅಂಚೆ ಮೂಲಕ ರಾಷ್ಟ್ರೀಯ ಆಯೋಗಕ್ಕೆ ಅಪೀಲು ವಿವರಣ ಪತ್ರವನ್ನು ಸಲ್ಲಿಸತಕ್ಕದ್ದು.

2) (1) ನೇ ಉಪ ನಿಯಮದ ಮೇರೆಗೆ ಸಲ್ಲಿಸಲಾದ ಪ್ರತಿಯೊಂದು ಅಪೀಲು ವಿವರಣ ಪತ್ರವು ಓದಲು ಬರುವಂಥ ಬರಹದಲ್ಲಿರಬೇಕು. ಬೆರಳಚ್ಚು ಮಾಡಿದ್ದು ಹೆಚ್ಚು ಅಪೇಕ್ಷಣೀಯ ಮತ್ತು ಅದು ಬೇರೆ ಬೇರೆ ಶಿರೋನಾಮೆಗಳಲ್ಲಿ ಸಂಕ್ಷಿಪ್ತವಾಗಿ ಯಾವುದೇ ವಾದವನ್ನಾಗಲಿ ಅಥವಾ ನಿರೂಪಣೆಯನ್ನಾಗಲಿ ಒಳಗೊಳ್ಳದಂತೆ ಅಪೀಲು ಆಧಾರಗಳನ್ನು ಹೇಳಿ ಆ ಆಧಾರಗಳಿಗೆ ಅನುಕ್ರಮ ಸಂಖ್ಯೆಗಳನ್ನು ಕೊಡತಕ್ಕದು.

3) ರಾಜ್ಯ ಆಯೋಗದ ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆದೇಶದ ಪ್ರಮಾಣಿತ ಪ್ರತಿಯನ್ನು ಮತ್ತು ಅಪೀಲು ವಿವರಣ ಪತ್ರದಲ್ಲಿನ ತಕರಾರುಗಳ ಆಧಾರಗಳನ್ನು ಸಮರ್ಥಿಸಲು ಅಗತ್ಯವಾದಂಥ ದಸ್ತಾವೇಜುಗಳನ್ನು ಪ್ರತಿಯೊಂದು ಅಪೀಲು ವಿವರಣ ಪತ್ರವು ಹೊಂದಿರತಕ್ಕದು.

4. ಈ ಅಧಿನಿಯಮದಲ್ಲಿ ಗೊತ್ತುಪಡಿಸಲಾದ ಕಾಲಪರಿಮಿತಿ ಅವಧಿಯ ಮುಕ್ತಾಯದ ನಂತರ ಅಪೀಲನ್ನು ಸಲ್ಲಿಸಿದಾಗ ಅದರ ಜೊತೆಗೆ ಕಾಲಪರಿಮಿತಿ ಅವಧಿಯಲ್ಲಿ ಅಪೀಲನ್ನು ಸಲ್ಲಿಸಲಾಗದಿರುವದಕ್ಕೆ ತನಗೆ ಸಾಕಷ್ಟು ಕಾರಣಗಳಿವೆಯೆಂದು ರಾಷ್ಟ್ರೀಯ ಆಯೋಗವನ್ನು ಸಮಾಧಾನ ಪಡಿಸಲು ಆಧರಿಸಲು ಸಂಗತಿಗಳನ್ನು ವಿವರಿಸಿದ ಸಮರ್ಥನೆ ಪಡೆದ ಅರ್ಜಿ ಇರತಕ್ಕದು.

5. ಮೇಲ್ಮನವಿದಾರನು ಅಪೀಲಿನ ಆರು ಪ್ರತಿಗಳನ್ನು ಹಾಜರು ಪಡಿಸತಕ್ಕದು.

6. ಸುಣಾವಣೆ ದಿನ ಅಥವಾ ಸುಣಾವಣೆಯ ಮುಂದೂಡಬಹುದಾದ ಯಾವುದೇ ದಿನದಂದು ಪಕ್ಷದಾರರಿಗೆ ಅಥವಾ ಅವರ ಏಜೆಂಟರಿಗೆ ರಾಷ್ಟ್ರೀಯ ಆಯೋಗದ ಎದುರು ಹಾಜರಾಗುವದು ನಿರ್ಬಂಧಕವಾಗಿರುತ್ತದೆ. ಅಂತಹ ದಿನದಂದು ಹಾಜರು ಆಗಲು ತಪ್ಪಿದರೆ, ಆಯೋಗವು ತನ್ನ ವಿವೇಚನಾಪರ ಅಪೀಲನ್ನು ಪಜಾ ಮಾಡಬಹುದು ಅಥವಾ ಅದರ ಗುಣಾವಗುಣವನ್ನು ಆಧರಿಸಿ ಏಕತರ್ಫಿ ನಿರ್ಣಯ ಮಾಡಬಹುದು.

7. ರಾಷ್ಟ್ರೀಯ ಆಯೋಗದ ಅನುಮತಿಯಿಲ್ಲದೆ ಅಪೀಲುದಾರನು ವಿವರಣೆ ಪತ್ರದಲ್ಲಿ ಹೇಳಲಾಗಿರುವ ತಕರಾರಿನ ಆಧಾರಗಳನ್ನು ಹೊರತುಪಡಿಸಿ ಇವರ ಯಾವುದೇ ಆಧಾರಗಳನ್ನು ವಿನಂತಿಸಲಾರನು ಅಥವಾ ವಾದಿಸಲಾರನು. ಆದರೆ ರಾಷ್ಟ್ರೀಯ ಆಯೋಗವು ಅಪೀಲನ್ನು ನಿರ್ಣಯಿಸುವಲ್ಲಿ ಅಪೀಲು ವಿವರಣಾ ಪತ್ರದಲ್ಲಿ ಹೇಳಲಾಗಿರುವ ತಕರಾರು ಆಧಾರಗಳ ಬಗ್ಗೆ ಅಷ್ಟೇ ಮುಂದುವರೆಯಬಹುದು.

ಆದರೆ ಬಾಧೆಗೊಳಗಾಗುವ ಪಕ್ಷದಾರನಿಗೆ ರಾಷ್ಟ್ರೀಯಾಯೋಗವು ವಾದಿಸಲು ಅವಕಾಶ ಕೊಡದ ಹೊರತು ತನ್ನ ನಿರ್ಣಯವನ್ನು ಆಧರಿಸಲಾರದು.

8. ಆಯೋಗವು ತಾನು ಮುಕ್ತವೆಂದು ಭಾವಿಸಬಹುದಾದಂತಹ ಷರತ್ತುಗಳ ಮೇಲೆ ಮತ್ತು ಯಾವುದೇ ಹಂತದಲ್ಲಿ ಅಪೀಲಿನ ಸುಣಾವಣೆಯನ್ನು ಮುಂದೂಡಬಹುದು. ಆದರೆ

Scanned with CamScanner

ಸಾಮಾನ್ಯವಾಗಿ ಒಂದಕ್ಕಿಂತ ಹೆಚ್ಚು ಬಾರಿಗೆ ಮುಂದೂಡಲಾರದು ಮತ್ತು ಸಾಧ್ಯವಿದ್ದಮಟ್ಟಿಗೆ ಅಪೀಲಿನ ಪ್ರಥಮ ಸುಣಾವಣೆಯ ದಿನಾಂಕದಿಂದ 90 ದಿನಗಳೊಳಗಾಗಿ ಅಪೀಲನ್ನು ನಿರ್ಣಯಿಸತಕ್ಕದ್ದು.

9. ರಾಷ್ಟ್ರೀಯ ಆಯೋಗದ ಅಪೀಲಿನಲ್ಲಿನ ಆದೇಶಕ್ಕೆ ಆಯೋಗದ ಸದಸ್ಯರು ರುಜು ಹಾಕತಕ್ಕದ್ದು ಮತ್ತು ದಿನಾಂಕವನ್ನು ನಮೂದಿಸತಕ್ಕದ್ದು ಮತ್ತು ಪಕ್ಷದಾರರಿಗೆ ಯಾವುದೇ ಶುಲ್ಕವಿಲ್ಲದೆ ಪುಕ್ಕಟ್ಟೆಯಾಗಿ ಕಳಿಸತಕ್ಕದ್ದು.

**ಕಾಲಪರಿಮಿತಿ ಅವಧಿ (ಪರಿಚ್ಛೇದ 24)** (Limitation Period)

1. ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಯಾವುದೇ ಫಿರ್ಯಾದನ್ನು ಅದನ್ನು ವ್ಯಾಜ್ಯಕಾರಣ ಉಂಟಾದ ದಿನಾಂಕದಿಂದ ಎರಡು ವರ್ಷಗಳ ಅವಧಿಯಲ್ಲಿ ಸಲ್ಲಿಸದಿರುವಲ್ಲಿ ಸ್ವೀಕರಿಸತಕ್ಕದಲ್ಲ.

2. (1) ನೇ ಉಪಕಲಮು ಏನನ್ನೇ ಒಳಗೊಂಡಿರುವಲ್ಲಿ (1) ನೇ ಉಪಕಲಮಿನಲ್ಲಿ ಗೊತ್ತುಪಡಿಸಿದ ಅವಧಿಯ ಅನಂತರವೂ ಫಿರ್ಯಾದನ್ನು ಸಂದರ್ಭಾನುಸಾರ ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಅಂಥ ಅವಧಿಯಲ್ಲಿ ಫಿರ್ಯಾದನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿದೆ ಎಂದು ಫಿರ್ಯಾದುದಾರನು ಸಮಾಧಾನಪಡಿಸಿದರೆ ಅದನ್ನು ಸ್ವೀಕರಿಸಬಹುದು.

ಆದರೆ, ಸಂದರ್ಭಾನುಸಾರ ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಅಂಥ ವಿಳಂಬವನ್ನು ಮನ್ನಾ ಮಾಡಲು ಕಾರಣಗಳನ್ನು ಅಭಿಲೇಖಿಸದ ಹೊರತು ಅಂಥ ಫಿರ್ಯಾದನ್ನು ಸ್ವೀಕರಿಸತಕ್ಕದ್ದಲ್ಲ.

**ಆದೇಶಗಳ ಅಂತಿಮತ (ಪರಿಚ್ಛೇದ 24)** (Finality of orders)

ಜಿಲ್ಲಾ ವೇದಿಕೆಯ, ರಾಜ್ಯ ಆಯೋಗದ ಅಥವಾ ರಾಷ್ಟ್ರೀಯ ಆಯೋಗದ ಆದೇಶಗಳು ಅವುಗಳನ್ನು ಆಕ್ಷೇಪಿಸಿ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅಪೀಲನ್ನು ಸಲ್ಲಿಸದಿರುವಾಗ ಅವು ಅಂತಿಮವಾದವುಗಳು ಆಗಿರತಕ್ಕದು.

**ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗದಿಂದ ಆದೇಶಗಳು** (Enforcement of orders by the Forum. the State Commission or the National Commission) **(ಪರಿಚ್ಛೇದ 25)**

ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗ ಮಾಡಿದ ಪ್ರತಿಯೊಂದು ಆದೇಶವನ್ನು ಸಂದರ್ಭಾನುಸಾರ ಜಿಲ್ಲಾ ವೇದಿಕೆ, ರಾಜ್ಯ ಆಯೋಗ ಅಥವಾ ರಾಷ್ಟ್ರೀಯ ಆಯೋಗವು ಆ ಆದೇಶವು ಯಾವುದೇ ನ್ಯಾಯಾಲಯವು ತನ್ನ ಮುಂದೆ ಇತ್ಯರ್ಥದಲ್ಲಿರುವ ದಾವೆಯಲ್ಲಿ ಮಾಡಿದ ಡಿಕ್ರೀ ಅಥವಾ ಆದೇಶ ಆಗಿದ್ದರೆ ಹೇಗೋ ಅದೇ ವಿಧಾನದಲ್ಲಿ ಜಾರಿಗೊಳಿಸತಕ್ಕದು ಮತ್ತು ಅದನ್ನು ಜಾರಿಗೊಳಿಸುವಲ್ಲಿ ತಾನು ಅಸಮರ್ಥವಾದ ಸಂದರ್ಭದಲ್ಲಿ ಅಂಥ ಆದೇಶವನ್ನು ಯಾವ ನ್ಯಾಯಾಲಯದ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯಲ್ಲಿ –

Scanned with CamScanner

ಎ) ಕಂಪನಿಯ ವಿರುದ್ಧ ಮಾಡಲಾಗಿರುವ ಆದೇಶದ ಸಂದರ್ಭದಲ್ಲಿ, ಆ ಕಂಪನಿಯು ರಜಿಸ್ಟರ್ಡ ಕಚೇರಿ ಇರುವಲ್ಲಿ; ಅಥವಾ

ಬಿ) ಇತರ ಯಾವುದೇ ವ್ಯಕ್ತಿಯ ವಿರುದ್ಧ ಮಾಡಲಾಗಿರುವ ಆದೇಶದ ಸಂದರ್ಭದಲ್ಲಿ ಆ ಸಂಬಂಧಪಟ್ಟ ಆ ವ್ಯಕ್ತಿಯು ಸ್ವಇಚ್ಛೆಯಿಂದ ವಾಸ ಮಾಡುತ್ತಿರುವಲ್ಲಿ ಅಥವಾ ವ್ಯವಹಾರವನ್ನು ನಡೆಸುತ್ತಿರುವ, ಅಥವಾ ಲಾಭಕ್ಕಾಗಿ ಕೆಲಸ ಮಾಡುತ್ತಿರುವ ಸ್ಥಳವು ಇರುವಲ್ಲಿ

ಅಂತಹ ಆ ನ್ಯಾಯಾಲಯಕ್ಕೆ ಜಾರಿಗೊಳಿಸಲು ಕಳಿಸತಕ್ಕದ್ದು ಮತ್ತು ಅನಂತರ ಯಾವ ನ್ಯಾಯಾಲಯಕ್ಕೆ ಅದನ್ನು ಕಳಿಸಲಾಗಿದೆಯೋ ಅದು ತನಗೆ ಜಾರಿಗೊಳಿಸಲು ಕಳಿಸಿದ್ದರೆ ಹೇಗ ಇದೆಯೋ ಹಾಗೆ ಆದೇಶವನ್ನು ಜಾರಿಗೊಳಿಸತಕ್ಕದ್ದು.

**ಹೆಚ್ಚಿನ ಅಧಿಕಾರಗಳು** (Additional Powers)

ಸಿವಿಲ್ ಪ್ರಕ್ರಿಯಾ ಸಂಹಿತೆ 1908 ನೀಡಿದ 6 ತರಹದ ಅಧಿಕಾರಗಳೊಂದಿಗೆ ಜಿಲ್ಲಾ ವೇದಿಕೆಗೆ ಇನ್ನು ಕೆಲವು ಅಧಿಕಾರಗಳನ್ನು ನೀಡಲಾಗಿದೆ. ಅದರಂತೆ, ವೇದಿಕೆಯು ಯಾವುದೇ

i) ವ್ಯಕ್ತಿಯೊಬ್ಬನ ಬಳಿಯಲ್ಲಿರುವ ಯಾವುದೇ ಸರಕುಗಳು, ದಾಖಲು ಪತ್ರಗಳು, ಲೆಕ್ಕಪತ್ರ, ಪುಸ್ತಕಗಳು ಮುಂತಾದವುಗಳನ್ನು ಪರೀಕ್ಷೆಗಾಗಿ ಹಾಜರು ಪಡಿಸಲು ಕೇಳಬಹುದು.

ii) ಯಾವುದೇ ತರಹದ ಬೇಕಾದ ಮಾಹಿತಿ ನೀಡುವಂತೆ ಕೇಳಬಹುದು.

iii) ಯಾವುದೇ ತನ್ನ ಅಧಿಕಾರಿಗಳಿಗೆ ಅಧಿಕಾರ ನೀಡಿ ನಾಶಗೊಳಿಸಬಹುದಾದ, ಹಾಳಮಾಡಬಹುದಾದ, ತಿದ್ದಬಹುದಾದ, ತಪ್ಪೆಸಗಬಹುದಾದ, ಮುಚ್ಚಿಡ ಬಹುದಾದಂತಹ ಯಾವುದೇ ಕಟ್ಟಡಗಳನ್ನು ಪ್ರವೇಶಿಸಿ ಬೇಕಾದ ಪುಸ್ತಕಗಳನ್ನು ಕಾಗದಗಳನ್ನು, ದಾಖಲು ಪತ್ರಗಳನ್ನು, ಸರಕುಗಳನ್ನು ಮುಟ್ಟುಗೋಲು ಹಾಕುವದು.

ಇವುಗಳನ್ನು ಪರೀಕ್ಷಿಸಿದ ನಂತರ, ವೇದಿಕೆಯು ಅವುಗಳನ್ನು ಹಿಡಿದಿಡಟ್ಟುಕೊಳ್ಳುವ ಅಥವಾ ಸಂಬಂಧಿಸಿದ ಕಕ್ಷಿದಾರನಿಗೆ ಮರಳಿಸುವ ಆದೇಶವನ್ನು ಜಾರಿಮಾಡಬಹುದು. (ನಿಯಮ 10)

ಸರಕುಗಳಲ್ಲಿದ್ದ ದೋಷಗಳ ಬಗ್ಗೆ ರುಜುವಾತು ಪಡಿಸುವುದು ಗ್ರಾಹಕನ ಜವಾಬ್ದಾರಿಯೊಡನೆ ಅದೇ ತೆರನಾಗಿ ಸೇವೆಗಳಿಗೆ ಸಂಬಂಧಿಸಿದಂತೆ ತಾನು ಕಂಡಂತಹ ಕೊರತೆಯನ್ನು ಪುರಾವೆ ಸಹಿತ ಸಿದ್ಧಮಾಡುವದು ಗ್ರಾಹಕನ ಜವಾಬ್ದಾರಿಯಾಗಿದೆ. ಅದು ಸಮಾಧಾನಕರವೆನಿಸಿದರೆ, ಈ ಕಾಯ್ದೆಯ ಪ್ರಕಾರ ವೇದಿಕೆಯು ಆದೇಶವನ್ನು ಪಾಸು ಮಾಡಬಹುದಾಗಿದೆ.

ಒಂದು ವೇಳೆ ಆದೇಶಗಳನ್ನು ಮೋಸತನದಿಂದ ಪಡೆದದ್ದಾಗಿದ್ದರೆ, ಅವುಗಳನ್ನು ಹಿಂತೆಗೆದುಕೊಳ್ಳುವ ಅಧಿಕಾರ ವೇದಿಕೆಗೆ ಇರುತ್ತದೆ. ಅದನ್ನು **Indian Bank v/s Satyam Fibres (India) RA Limited. AIR 1996 SC 2592** ಪ್ರಕರಣದಲ್ಲಿ ಈ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯವು ಎತ್ತಿ ಹಿಡಿದಿದೆ.

Scanned with CamScanner

ಜಿಲ್ಲಾ ವೇದಿಕೆಯ ನಿರ್ಣಯ - ಫಿರ್ಯಾದುದಾರನಿಗೆ ಪರಿಹಾರ (Finding of the District Forum - A Relief to Complainant) (ಪರಿಚ್ಛೇದ 14)

1. 13 ನೇ ಕಲಮಿನ ಮೇರೆಗೆ ವ್ಯವಹರಣೆಗಳನ್ನು ನಡೆಸಿದ ಅನಂತರ ಜಿಲ್ಲಾ ವೇದಿಕೆಯು ಫಿರ್ಯಾದಿನಲ್ಲಿ ಹೇಳಲಾಗಿರುವ ನ್ಯೂನ್ಯತೆಗಳಲ್ಲಿ ಯಾವುದೇ ನ್ಯೂನ್ಯತೆಯನ್ನು ಆಕ್ಷೇಪಿಸಲಾದ ಸರಕುಗಳು ಹೊಂದಿವೆ ಎಂದು ಸಮಾಧಾನ ಪಟ್ಟರೆ ಅಥವಾ ಸೇವೆಗೆ ಸಂಬಂಧಿಸಿದಂತೆ ಫಿರ್ಯಾದಿನಲ್ಲಿ ಮಾಡಲಾಗಿರುವ ಯಾವುದೇ ಆಪಾದನೆಗಳು ರುಜುವಾತಾದರೆ ಅದು ಎದುರು ಪಕ್ಷದವರು ಕೆಳಗೆ ಹೇಳಲಾಗಿರುವುದರಲ್ಲಿ ಅಂದರೆ –

ಎ) ಸಮುಚಿತ ಪ್ರಯೋಗ ಶಾಲೆಯು ಪ್ರಶ್ನಿಸಲಾಗಿರುವ ಸರಕುಗಳಲ್ಲಿ ಇರುವ ಎತ್ತಿ ತೋರಿಸಿದ ನ್ಯೂನತೆಯನ್ನು ತೆಗೆದು ಹಾಕಲು.

ಬಿ) ಯಾವುದೇ ನ್ಯೂನತೆಯಿಂದ ಮುಕ್ತವಾಗಿರುವ ಅದೇ ವರ್ಣನೆಯ ಹೊಸ ಸರಕುಗಳನ್ನು ಬದಲಿಗೆ ಕೊಡುವಂತೆ.

ಸಿ) ಫಿರ್ಯಾದುದಾರನು ಕೊಟ್ಟ ಬೆಲೆಯನ್ನು ಅಥವಾ ಸಂದರ್ಭಾನುಸಾರ ವೆಚ್ಚಗಳನ್ನು ಫಿರ್ಯಾದುದಾರನಿಗೆ ಹಿಂತಿರುಗಿಸುವಂತೆ;

ಡಿ) ಎದುರು ಪಕ್ಷದವರ ನಿರ್ಲಕ್ಷ್ಯದ ಕಾರಣದಿಂದಾಗಿ ಗ್ರಾಹಕನು ಅನುಭವಿಸಿದ ಯಾವುದೇ ಹಾನಿ ಅಥವಾ ಕ್ಷತಿಗಾಗಿ ಪರಿಹಾರ ಧನವೆಂದು ತಾನು ಕೊಡಿಸಿದಂಥ ಮೊತ್ತದ ಹಣವನ್ನು ಗ್ರಾಹಕನಿಗೆ ಸಂದಾಯ ಮಾಡಲು.

ಇವುಗಳಲ್ಲಿ ಯಾವುದೇ ಒಂದನ್ನು ಅಥವಾ ಇನ್ನೂ ಹೆಚ್ಚಿನವುಗಳನ್ನು ಅವನು ಮಾಡುವಂತೆ ನಿರ್ದೇಶಿಸಿ ಆದೇಶವನ್ನು ಮಾಡತಕ್ಕದ್ದು.

ಗ್ರಾಹಕರು ಅಪೇಕ್ಷಿಸಿದ ಪರಿಹಾರ ಮತ್ತು ಘಟನೆಗಳನ್ನಾಧರಿಸಿ, ಪರಿಹಾರ ವೇದಿಕೆ/ ಆಯೋಗವು ಈ ಕೆಳಗಿನ ಒಂದು ಅಥವಾ ಹೆಚ್ಚಿನ ಪರಿಹಾರಗಳನ್ನು ನೀಡಬಹುದಾಗಿದೆ.

i) ಸರಕಿನಿಂದ ದೋಷಗಳನ್ನು ಸರಿಪಡಿಸುವದು.

ii) ಸರಕುಗಳನ್ನು ಬದಲಿಸಿ ಕೊಡುವದು.

iii) ಪಾವತಿಸಿದ ಬೆಲೆಯನ್ನು ಹಿಂತಿರುಗಿಸುವುದು.

iv) ಅನುಭವಿಸಿದ ನಷ್ಟ ಅಥವಾ ಕಷ್ಟಕ್ಕೆ ದ್ರವ್ಯಪರಿಹಾರ ನೀಡುವುದು.

v) ಅಪಾಯಕಾರಕ ಸರಕುಗಳನ್ನು ಮಾರದಿರುವ ನಿರ್ಬಂಧ.

vi) ಕಕ್ಷಿದಾರರಿಗೆ ಸಾಕಷ್ಟು ವೆಚ್ಚಗಳನ್ನು ಭರಿಸುವ ಅವಕಾಶ ನೀಡುವದು.

Scanned with CamScanner

| ಪ್ರಕರಣಗಳು | ನಿರ್ಣಯ |
| --- | --- |
| 1. A.P. State Electricity Board v/s State Electricity Consumers Association (1992) CPJ 148 NC. | ಎದುರು ಕಕ್ಷಿದಾರನು ಹೊಸ ಭರವಸೆಯೊಂದಿಗೆ ಹೊಸ ಸರಕುಗಳನ್ನು ನೀಡುವಂತೆ ಅಥವಾ ದುರಸ್ತಿಗೊಳಿಸುವಂತೆ ಅಥವಾ ದೋಷನಿವಾರಿಸುವಂತೆ ಆದೇಶಿಸುವರೊಂದಿಗೆ ಫಿರ್ಯಾದುದಾರನಿಗೆ ದ್ರವ್ಯ ಪರಿಹಾರ ನೀಡುವಂತೆಯು ಪೂರ್ಯೆಕೆದಾರನಿಗೆ ಆದೇಶ ನೀಡಬಹುದಾಗಿದೆ. ಒಂದು ವೇಳೆ ಫಿರ್ಯಾದಿದಾರನು ಅದರಿಂದ ನಷ್ಟ-ಕಷ್ಟ ಅನುಭವಿಸಿದ್ದರೆ ದ್ರವ್ಯ ಪರಿಹಾರದ ಆದೇಶದ ಬೇಡಿಕೆ ನೀಡಬಹುದು. |
| 2. Ravinder Singh v/s Premnath Motors (1991) CPJ 211 HP | ಸರಕುಗಳ ಗುಣಮಟ್ಟ ಕಳೆದುಕೊಳ್ಳದ ಅವುಗಳ ದೋಷ ನಿವಾರಣೆ ಸಾಧ್ಯವಿಲ್ಲದಿದ್ದರೆ ಅವುಗಳನ್ನು ಪೂರ್ತಿಯಾಗಿ ಬದಲಾಯಿಸುವಂತೆ ಆದೇಶ ನೀಡಬಹುದು. |
| 3. Bharat Tractors v/s Sri Ram Chandra (1991) CPJ 192 NC. | ಎದುರು ಪಕ್ಷದ ನಿರ್ಲಕ್ಷತನವನ್ನು ಸಿದ್ಧಮಾಡಿದಾಗ ಪರಿಹಾರವನ್ನು ಆದೇಶಿಸಬಹುದಾಗಿದೆ. ಅವನ ನಿರ್ಲಕ್ಷತನದಿಂದಾಗಿ ಫಿರ್ಯಾದುದಾರನು ನಷ್ಟ ಅನುಭವಿಸಿದ್ದರೆ ಈ ಆದೇಶ ನೀಡಬಹುದಾಗಿದೆ. |
| 4. Harish Kumar v/s Sunil Blood Bank (1991) CPJ 645 NC. | ನಿರ್ಲಕ್ಷತನವೆಂದರೆ ಒಬ್ಬ ಸಾಮಾನ್ಯ ತಿಳುವಳಿಕೆಯ ವ್ಯಕ್ತಿ ತೋರಿಸಬಹುದಾದ ಕಾಳಜಿಯನ್ನು ನಿರ್ವಹಿಸಿದ ನಿರ್ಲಕ್ಷತನ. ಪ್ರತಿಯೊಂದು ಪ್ರಕರಣದಲ್ಲಿ ಕಾಳಜಿಯು ಭಿನ್ನವಾಗಿರುತ್ತದೆ. ಎದುರು ಪಕ್ಷದವನು ಕಾಳಜಿವಹಿಸಬೇಕಾದ ಕರ್ತವ್ಯ ಹೊಂದಿರಬೇಕು. ಅದಕ್ಕೆ ತಪ್ಪಿದರೆ ನಿರ್ಲಕ್ಷತನ ಉದ್ಭವಿಸುತ್ತದೆ. ಪರಿಹಾರವು ಮಾನಸಿಕ ವೇದನೆಗೆ ಮತ್ತು ಖರ್ಚಿಗೆ ಸಂಬಂಧಿಸಿದ್ದಾಗಿರುತ್ತದೆ. ಅದು ಕೆಟ್ಟಿದ್ದರೆ ಪರಿಹಾರ ಕೇಳಬಹುದಾಗಿದೆ. |

Scanned with CamScanner

| | |
|---|---|
| 5. Dist. Manager Telephones Patna v/s Dr. Tarun Bhartuar (1992) I CPJ 47 Nc. | ಸಾಧ್ಯವಾದಷ್ಟು ಪರಿಹಾರವನ್ನು ಪರಿಮಾಣಗೊಳಿಸಬೇಕು. ಫಿರ್ಯಾದುದಾರನು ಅದನ್ನು ಅನುಭವಿಸಿದದ್ದಾನೆಂದು ಸಮಂಜಸವಾಗಿ ಲೆಕ್ಕಿಸಬೇಕು. ಫಿರ್ಯಾದುದಾರನು ಅವನ್ನು ಪೂರ್ತಿಯಾಗಿ ಸಿದ್ಧಗೊಳಿಸಿದಾಗ, ಅವನು ಕೇಳಿದಷ್ಟು ಪರಿಹಾರ ನೀಡುವಂತೆ ವೇದಿಕೆಗಳು ನಿರ್ಣಯ ನೀಡುವದಕ್ಕೆ ಯಾವುದೇ ಅಭ್ಯಂತರಗಳಿಲ್ಲ. |
| 6. United India Ins. Co. Ltd. v/s Mohanlal and sons (1992) I CPR 364 NC. | ಫಿರ್ಯಾದುದಾರನು ತನ್ನ ಅಜ್ಞಾನದಿಂದ ನಿರ್ದಿಷ್ಟ ಪರಿಹಾರ ಕೇಳಿಲ್ಲವೆಂಬ ಕಾರಣದಿಂದಾಗಿ ಅಕ್ಷೇಪಣೆಯನ್ನು ಪೂರ್ತಿಯಾಗಿ ಕೈಬಿಡುವದಕ್ಕೆ ಕಾರಣವಾಗಲಾರದು. |
| 7. Air India v/s Suganda Ravi Mashelkar (1993) I CPJ 643 NC. | ಸಾಗಾಣಿಕೆದಾರರ ನಿರ್ಲಕ್ಷದಿಂದಾಗಿಯೇ ನಷ್ಟವಂತಾಗಿದೆಯೆಂಬುದಕ್ಕೆ ಪುರಾವೆಗಳಿಲ್ಲದಿದ್ದರೆ ಈ ವೇದಿಕೆಗಳೂ ಅವರನ್ನು ಪರಿಹಾರ ನೀಡಲಿಕ್ಕೆ ಆದೇಶಿಸಲಾರವು. ಇದನ್ನು Indian Airlines v/s Rajshekhar Upadhyay ಪ್ರಕರಣದಲ್ಲಿಯೂ ಸೂಚಿಸಲಾಗಿದೆ. |
| 8. Lucknow Development Authority v/s M.K. Gupta (1994) AIR 787 SC. | ಫಿರ್ಯಾದುದಾರನು ಮಾನಸಿಕ ತೊಂದರೆಯಿಂದ ಬಳಲಿದ್ದನ್ನು ಅತ್ಯಂತ ಕಾಳಜಿಪೂರ್ವಕವಾಗಿ ದಾಖಲಿಸಿಕೊಂಡ ನಂತರ ಆಯೋಗವು ತೃಪ್ತಿಗೊಂಡರೆ ತಕ್ಷಣವೇ ಫಿರ್ಯಾಧಿದಾರನಿಗೆ ಪರಿಹಾರ ನೀಡುವಂತೆ ಸಂಬಂಧಿಸಿದ ಇಲಾಖೆಗೆ ಅಜ್ಞಾಪಿಸಬಹುದು. ಒಂದಕ್ಕಿಂತ ಹೆಚ್ಚಿನ ಇಲಾಖೆಗಳಿದ್ದರೆ, ಅವರು ಪರಿಹಾರವನ್ನು ಹಂಚಿಕೆಯಾಧರಿಸಿ ಪಾವತಿಸಬೇಕು. |

Scanned with CamScanner

ತಂತಿ ಸಂದೇಶವನ್ನು ತಪಮಾಡಿ ನೀಡಿದ್ದರಿಂದ ನಷ್ಟ ಅಥವಾ ನೋವು ಅಗಿದ್ದನ್ನು ಸಿದ್ಧಪಡಿಸಿದರ, ಅದಕ್ಕೂ ಪರಿಹಾರ ಆದೇಶಿಸಬಹುದು. ಅದರಂತೆಯೇ, ಒಂದು ಗೃಹ ನಿರ್ಮಾಣ ಮಂಡಳಿಯು ಜಾಗೆಯನ್ನು ಖರೀದಿಸಿದ ವ್ಯಕ್ತಿಗೆ ಅದನ್ನು ಹಸ್ತಾಂತರಿಸುವಲ್ಲಿ ವಿಲಂಬ ಮಾಡಿದಾಗಲೂ ಪರಿಹಾರ ಆದೇಶಿಸಬಹುದು.

ಎದುರು ಪಕ್ಷದವನು ಯಾವುದೇ ಪರಿಹಾರ ಕೇಳಲು ಬರುವದಿಲ್ಲ. ಆದೇಶ ಅಥವಾ ನಿರ್ದೇಶನಗಳನ್ನು ಎದುರು ಪಕ್ಷದವರಿಗೆ ನೀಡಲಾಗುತ್ತದೆ. ಅವನು ಯಾವುದೇ ಪ್ರತಿ ಆಕ್ಷೇಪಣ ಮಾಡಲಾರನು. ಆದರೆ ದೂರಿನಲ್ಲಿ ಎದುರು ಪಕ್ಷದವನು ಗ್ರಾಹಕನಾಗಿದ್ದರೆ ಪ್ರತಿ ಆಕ್ಷೇಪಣ ಮಾಡಬಹುದು.

**ಅಪೀಲು** (Appeal) **(ಪರಿಚ್ಛೇದ - 15) :** ಜಿಲ್ಲಾ ವೇದಿಕೆಯು ಮಾಡಿದ ಆದೇಶದಿಂದ ಬಂಧಿತನಾದ ಯಾವನೇ ವ್ಯಕ್ತಿಯು ಆದೇಶ ಮಾಡಿದ ದಿನಾಂಕದಂದು ಮೂವತ್ತು ದಿನಗಳ ಅವಧಿಯಲ್ಲಿ ರಾಜ್ಯ ಆಯೋಗಕ್ಕೆ ಅಂಥ ಆದೇಶದ ವಿರುದ್ಧ ಅಪೀಲನ್ನು ಸಲ್ಲಿಸಬಹುದು.

ಆದರೆ, ಸದರೀ ಮೂವತ್ತು ದಿವಸಗಳ ಅವಧಿ ಮುಗಿದ ನಂತರ ಸಲ್ಲಿಸಿದ ಅಪೀಲನ್ನು ಆ ಅವಧಿಯಲ್ಲಿ ಅಪೀಲನ್ನು ಸಲ್ಲಿಸದಿರುವದಕ್ಕೆ ಸಾಕಷ್ಟು ಕಾರಣವಿದೆ ಎಂದು ತನಗೆ ಸಮಾಧಾನವಾದರೆ ರಾಜ್ಯ ಆಯೋಗವು ಅದನ್ನು ಸ್ವೀಕರಿಸಬಹುದು.

## ಬ) ರಾಜ್ಯ ಗ್ರಾಹಕರ ರಕ್ಷಣಾ ಆಯೋಗ (ಪರಿಚ್ಛೇದ 16 ರಿಂದ 19) (State Commission)

ಈ ಕಾನೂನು ಪ್ರಕಾರ ರಾಜ್ಯ ಗ್ರಾಹಕ ವಿವಾದಗಳ ಪರಿಹಾರ ಆಯೋಗವನ್ನು ರಚಿಸಲಿಕ್ಕೆ ತನ್ನ ಅಧಿಸೂಚನೆ ಮೂಲಕ ರಾಜ್ಯ ಸರ್ಕಾರವು ಸ್ಥಾಪಿಸಬಹುದಾಗಿದೆ.

- **ರಚನೆ (ಪರಿಚ್ಛೇದ 16)** (Composition)

1) ಪ್ರತಿಯೊಂದು ರಾಜ್ಯ ಆಯೋಗವು

ಎ) ಉಚ್ಚನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಮತ್ತು ರಾಜ್ಯ ಸರಕಾರದಿಂದ ನೇಮಿತನಾಗುವ ವ್ಯಕ್ತಿಯನ್ನು ಆತನು ಅಧ್ಯಕ್ಷನಾಗಿರತಕ್ಕದು.

ಆದರೆ, ಈ ವಾಕ್ಯಾವಳಿಯ ಮೇರೆಗೆ ನೇಮಕಾತಿಯನ್ನು ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯೊಡನೆ ಸಮಾಲೋಚಿಸಿದ ಹೊರತು ಮಾಡತಕ್ಕದಲ್ಲ.

ಬಿ) i) ಅವರು 35 ವರ್ಷಕ್ಕಿಂತ ಕಡಿಮೆಯವರಾಗಿರಬಾರದು.

ii) ಅಂಗೀಕೃತ 'ವಿಶ್ವವಿದ್ಯಾಲಯದಿಂದ ಪದವಿಹೊಂದಿರಬೇಕು.

iii) ಯೋಗ್ಯತೆ (ability) ನೀತಿನಿಷ್ಠೆ, ಸ್ಥಾನಮಾನ ಮತ್ತು ಅರ್ಥಶಾಸ್ತ್ರ, ಕಾನೂನು, ವಾಣಿಜ್ಯ, ಲೆಕ್ಕಪತ್ರ, ಉದ್ಯಮ, ಸಾರ್ವಜನಿಕ ವಿಷಯಗಳು ಅಥವ ಆಡಳಿತದ ಸಾಕಷ್ಟು ಜ್ಞಾನು ಅಥವಾ ಅನುಭವ ಅಥವಾ ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವ್ಯವಹರಿಸುವ ಸಾಮರ್ಥ್ಯವನ್ನು ತೋರಿಸಿದ ಇಬ್ಬರು ಇತರ ಸದಸ್ಯರನ್ನು ಅವರಲ್ಲಿ ಒಬ್ಬರು ಮಹಿಳೆ ಇರತಕ್ಕದು–ಹೊಂದಿರತಕ್ಕದು.

Scanned with CamScanner

ಆದರೆ ಈ ವಾಕ್ಯಾವಳಿಯ ಮೇರೆಗೆ ಮಾಡಲಾಗುವ ಪ್ರತಿಯೊಂದು ನೇಮಕಾತಿಯನ್ನು ಕೆಳಗೆ ಹೇಳಲಾಗಿರುವವರನ್ನು, ಅಂದರೆ

1. ರಾಜ್ಯ ಆಯೋಗದ ಅಧ್ಯಕ್ಷ – ಸಭಾಪತಿ
2. ರಾಜ್ಯದ ಕಾನೂನು ಇಲಾಖೆಯ ಕಾರ್ಯದರ್ಶಿ – ಸದಸ್ಯ
3. ರಾಜ್ಯದಲ್ಲಿ ಗ್ರಾಹಕರ ವಿಷಯಗಳ ಬಗ್ಗೆ ವ್ಯವಹರಿಸುವ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿಯನ್ನು – ಸದಸ್ಯ ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ರಾಜ್ಯ ಸರಕಾರವು ಮಾಡತಕ್ಕದು.

2) ರಾಜ್ಯ ಆಯೋಗ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನ ಅಥವಾ ಗೌರವಧನ ಮತ್ತು ಇತರ ಭತ್ಯೆಗಳು ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ರಾಜ್ಯ ಸರಕಾರವು ಗೊತ್ತುಪಡಿಸಬಹುದಾಗಿರುವಂಥವುಗಳು ಇರತಕ್ಕದು.

3) ರಾಜ್ಯ ಆಯೋಗದ ಪ್ರತಿಯೊಬ್ಬ ಸದಸ್ಯನು ಐದು ವರ್ಷಗಳ ಅವಧಿಯವರೆಗೆ ಅಥವಾ ಅರವತ್ತೇಳು ವರ್ಷಗಳ ವಯಸ್ಸಿನವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಪದವನ್ನು ಧಾರಣ ಮಾಡತಕ್ಕದು ಮತ್ತು ಅವರು ಮರು ನೇಮಕಾತಿಗೆ ಅರ್ಹರಾಗಿರತಕ್ಕದಲ್ಲ.

4) (3) ನೇ ಉಪಕಲಮು ಏನನ್ನೇ ಒಳಗೊಂಡಿರುವಾಗ್ಯೂ ಗ್ರಾಹಕರ ಸಂರಕ್ಷಣಾ (ತಿದ್ದುಪಡಿ) ಅಧಿನಿಯಮ 1993ರ ಪ್ರಾರಂಭಕ್ಕೆ ಮೊದಲೇ ನೇಮಿತವಾದ ವ್ಯಕ್ತಿಯು, ಸಂದರ್ಭಾನುಸಾರ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ತನ್ನ ಅವಧಿ ಮುಕ್ತಾಯವಾಗುವವರೆಗೆ ಆ ಪದದಲ್ಲಿ ಮುಂದುವರೆಯತಕ್ಕದು.

ನ್ಯಾಯಾಲಯದ ಹಿನ್ನಲೆಯುಳ್ಳ ವ್ಯಕ್ತಿಯೆಂದರೆ ಜಿಲ್ಲಾ ಮಟ್ಟದ ನ್ಯಾಯಾಲಯದಲ್ಲಿ ಅಥವಾ ಅದಕ್ಕೆ ಸಮನಾದ ಟ್ರಿಬುನಲ್‌ಗಳಲ್ಲಿ ಪ್ರಿಸೆಡಿಂಗ್ ಅಧಿಕಾರಿಯೆಂದು ಕನಿಷ್ಟ 10 ವರ್ಷಗಳವರೆಗೆ ಕಾರ್ಯಮಾಡಿದವರೆಂದು ಅರ್ಥ.

ಆದರೆ, ಈ ಕೆಳಗಿನ ಅನರ್ಹತೆಗಳನ್ನು ಹೊಂದಿದ ವ್ಯಕ್ತಿಯು ಸದಸ್ಯನಾಗಲು ಬರುವದಿಲ್ಲ.

i) ರಾಜ್ಯಸರ್ಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡಿರುವ ಅಪರಾಧಕ್ಕಾಗಿ ಸಿದ್ಧದೋಷಿಯಾಗಿರುವಲ್ಲಿ ಅಥವಾ

ii) ಬಿಡುಗಡೆಗೊಳ್ಳದ ದಿವಾಳಿಕೋರನಾಗಿದ್ದರೆ ಅಥವಾ

iii) ಅಸ್ವಸ್ಥ ಮನಸ್ಸಿನವನಾಗಿದ್ದು, ಅರ್ಹನ್ಯಾಯಾಲಯ ಹಾಗೆ ಅವನನ್ನು ಘೋಷಿಸಿದ್ದರೆ ಅಥವಾ

iv) ಸರ್ಕಾರದ ಅಥವಾ ಸರ್ಕಾರದ ಒಡೆತನದ ನಿಗಮ ಅಥವಾ ಸರ್ಕಾರ ನಿಯಂತ್ರಣದಲ್ಲಿರುವ ಕಂಪನಿಯಿಂದ ತೆಗೆದು ಹಾಕಲ್ಪಟ್ಟಿದ್ದರೆ ಅಥವಾ ಅಮಾನತುಗೊಂಡಿದ್ದರೆ ಅಥವಾ

v) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಅವನು ಸದಸ್ಯನಾಗಿ ನಿಷ್ಪಕ್ಷಪಾತವಾಗಿ ನಿರ್ಣಯಗಳನ್ನು ತಕ್ಕೊಳ್ಳುವದಕ್ಕೆ ಅಡ್ಡಿಯಾಗುವಂತಹ ಆಸಕ್ತಿಯನ್ನು ಹೊಂದಿದ್ದರೆ ಅಥವಾ

Scanned with CamScanner

vi) ರಾಜ್ಯಸರ್ಕಾರ ಸೂಚಿಸುವ ಯಾವುದೇ ಅನರ್ಹತೆಗಳನ್ನು ಹೊಂದಿದ್ದರೆ, ಅವರು ವೇದಿಕೆಯ ಸದಸ್ಯರಾಗಲು ಅರ್ಹರಲ್ಲ.

- ರಾಜ್ಯ ಆಯೋಗದ ಅಧಿಕಾರವ್ಯಾಪ್ತಿ
(Jurisdiction of the State Commission)

(ಪರಿಚ್ಛೇದ 17) ಈ ಅಧಿನಿಯಮ ಇತರ ಉಪಬಂಧಗಳಿಗೆ ಒಳಪಟ್ಟು ರಾಜ್ಯ ಆಯೋಗಕ್ಕೆ.

ಎ) i) ಸರಕುಗಳ ಅಥವಾ ಸೇವೆಗಳ ಮೌಲ್ಯವು ಮತ್ತು ಕೇಳಲಾಗಿರುವ ಪರಿಹಾರ ಧನವು, ಯಾವುದಾದರೂ ಇದ್ದರೆ, 20 ಲಕ್ಷ ರೂಪಾಯಿಗಳನ್ನು ಮೀರುವ 1 ಕೋಟಿ ರೂಪಾಯಿಗಳನ್ನು ಮೀರದಿರುವ ಫಿರ್ಯಾದುಗಳನ್ನು;

ii) ರಾಜ್ಯದಲ್ಲಿನ ಯಾವುದೇ ಜಿಲ್ಲಾ ವೇದಿಕೆಯ ಆದೇಶಗಳ ವಿರುದ್ಧದ ಅಪೀಲನ್ನು ಸ್ವೀಕರಿಸಲು; ಮತ್ತು

ಬಿ) ರಾಜ್ಯದಲ್ಲಿನ ಯಾವುದೇ ಜಿಲ್ಲಾ ವೇದಿಕೆಯಲ್ಲಿ ಇತ್ಯರ್ಥದಲ್ಲಿರುವ ಅಥವಾ ಇತ್ಯರ್ಥಗೊಳಿಸಲಾಗಿರುವ ಯಾವುದೇ ಗ್ರಾಹಕರ ವಿವಾದದಲ್ಲಿ, ಜಿಲ್ಲಾ ವೇದಿಕೆಯು ಕಾನೂನು ಮೇರೆಗೆ ತನ್ನಲ್ಲಿ ನಿಹಿತವಾಗಿಲ್ಲದಿರುವ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದೆ ಅಥವಾ ಹಾಗೆ ತನ್ನಲ್ಲಿ ನಿಹಿತವಾಗಿರುವ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ವಿಫಲವಾಗಿದೆ ಅಥವಾ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಯಿಸುವಲ್ಲಿ ಕಾನೂನು ಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಂಡಿದೆ ಅಥವಾ ಮಹತ್ವದ ಅಕ್ರಮವೆಸಗಿದೆ ಎಂದು ರಾಜ್ಯ ಆಯೋಗಕ್ಕೆ ಕಂಡು ಬಂದಲ್ಲಿ ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಸಮುಚಿತ ಆದೇಶ ಮಾಡಲು ಅಧಿಕಾರ ವ್ಯಾಪ್ತಿ ಇರತಕ್ಕದು.

**ರಾಜ್ಯ ಆಯೋಗಗಳಿಗೆ ಅನ್ವಯಿಸುವ ಪ್ರಕ್ರಿಯೆ (ಪರಿಚ್ಛೇದ 18)**
(Procedure applicable to State Commission)

ಜಿಲ್ಲಾ ವೇದಿಕೆಯು, ಫಿರ್ಯಾದುಗಳನ್ನು ವಿಲೇ ಮಾಡಲು ಅನ್ವಯಿಸುವ 12, 13 ಮತ್ತು 14 ನೇ ಕಲಮುಗಳ ಉಪಬಂಧಗಳು ಮತ್ತು ಅವುಗಳ ಮೇರೆಗೆ ರಚಿಸಲಾದ ನಿಯಮಗಳು ಅವಶ್ಯವಾದ ಮಾರ್ಪಾಡುಗಳೊಂದಿಗೆ ವಿವಾದಗಳ ವಿಲೇ ಮಾಡಲು ರಾಜ್ಯ ಆಯೋಗಕ್ಕೆ ಅನ್ವಯಿಸತಕ್ಕದು.

**ಅಧ್ಯಕ್ಷರ ಹುದ್ದೆ ಖಾಲಿ ಬೀಳುವುದು (ಪರಿಚ್ಛೇದ 18A)**
(Vacancy in the office of the President)

ಜಿಲ್ಲಾ ವೇದಿಕೆಯ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ ಅಧ್ಯಕ್ಷರ ಹುದ್ದೆಯು ಖಾಲಿ ಬಿದ್ದಾಗ ಅಥವಾ ಅಂಥ ಯಾವನೇ ಅಧ್ಯಕ್ಷನು ಆತನ ಗೈರ ಹಾಜರಿಯಿಂದಾಗಿ ಅಥವಾ ಅನ್ಯಥಾ ತನ್ನ ಪದೀಯ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥನಾದಾಗ ಆ ಹುದ್ದೆಯ ಕರ್ತವ್ಯಗಳನ್ನು, ಜಿಲ್ಲಾ ವೇದಿಕೆಯ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ

Scanned with CamScanner

ಅಧ್ಯಕ್ಷನಾಗಿ ನೇಮಿತನಾಗಲು ಅರ್ಹನಾಗಿರುವ ಮತ್ತು ಆ ಉದ್ದೇಶಕ್ಕಾಗಿ ರಾಜ್ಯ ಸರಕಾರವು ನೇಮಕ ಮಾಡಬಹುದಾದ ವ್ಯಕ್ತಿಯು ನಿರ್ವಹಿಸತಕ್ಕದು.

• ರಾಜ್ಯ ಆಯೋಗದ ಅಧಿಕಾರಗಳು

ಜಿಲ್ಲಾ ವೇದಿಕೆಯು ಹೊಂದಿದ ಶಾಸನಾತ್ಮಕ ಅಧಿಕಾರಗಳನ್ನು ಮತ್ತು ಹೆಚ್ಚುವರಿ ಅಧಿಕಾರಗಳನ್ನು ಈ ರಾಜ್ಯ ಆಯೋಗವು ಸಹ ಹೊಂದಿರುತ್ತದೆ.

ಅಪೀಲುಗಳು (Appeals) **(ಪರಿಚ್ಛೇದ 19)** : ರಾಜ್ಯ ಆಯೋಗವು 17 ನೇ ಕಲಮಿನ (ಎ) ಉಪ ಕಲಮಿನ (i) ನೇ ವಾಕ್ಯಾವಳಿಯ ಮೇರೆಗೆ ಇರುವ ತನ್ನ ಅಧಿಕಾರವನ್ನು ಚಲಾಯಿಸಿ ಮಾಡಿದ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಅಂಥ ಆದೇಶದ ವಿರುದ್ಧ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯಲ್ಲಿ ಗೊತ್ತುಪಡಿಸಲಾದ ನಮೂನೆಯಲ್ಲಿ ಮತ್ತು ವಿಧಾನದಲ್ಲಿ ರಾಷ್ಟ್ರೀಯ ಆಯೋಗಕ್ಕೆ ಅಪೀಲನ್ನು ಸಲ್ಲಿಸಬಹುದು.

ಪರಂತು ಸದರೀ ಮೂವತ್ತು ದಿವಸಗಳ ಅವಧಿಯ ಮುಕ್ತಾಯದ ಅನಂತರ ಸಲ್ಲಿಸಿದ ಅಪೀಲನ್ನು ರಾಷ್ಟ್ರೀಯ ಆಯೋಗವು, ಆ ಅವಧಿಯಲ್ಲಿ ಅಪೀಲನ್ನು ಸಲ್ಲಿಸಲು ಆಗದಿರುವುದಕ್ಕೆ ಸಾಕಷ್ಟು ಕಾರಣವಿದೆ ಎಂದು ತನಗೆ ಸಮಾಧಾನವಾದರೆ ಅದನ್ನು ಪುರಸ್ಕರಿಸಬಹುದು.

## ಕ) ರಾಷ್ಟ್ರೀಯ ಗ್ರಾಹಕರ ರಕ್ಷಣಾ ಆಯೋಗ (National Commission) (ಪರಿಚ್ಛೇದ 20 ರಿಂದ 24)

ಈ ಕಾನೂನಿನ ಪರಿಚ್ಛೇದ 9 ರಡಿಯಲ್ಲಿ ಕೇಂದ್ರ ಸರ್ಕಾರವು ಅಧಿಸೂಚನೆಯ ಪ್ರಕಾರ ರಾಷ್ಟ್ರ ಮಟ್ಟದ ಗ್ರಾಹಕರ ವಿವಾದಗಳ ಪರಿಹಾರ ಆಯೋಗವನ್ನು ರಚಿಸಬಹುದಾಗಿದೆ.

• ರಾಷ್ಟ್ರೀಯ ಆಯೋಗದ ರಚನೆ **(ಪರಿಚ್ಛೇದ 20)** (Composition)

1) ರಾಷ್ಟ್ರೀಯ ಆಯೋಗವು.

ಎ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಮತ್ತು ಕೇಂದ್ರ ಸರಕಾರದಿಂದ ನೇಮಿತವಾಗುವ ವ್ಯಕ್ತಿಯು ಆತನು ಅಧ್ಯಕ್ಷನಾಗಿರುತಕ್ಕದು.

ಪರಂತು ಈ ವಾಕ್ಯಾವಳಿಯ ಮೇರೆಗೆ ನೇಮಕಾತಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯನ್ಯಾಯಮೂರ್ತಿಯೊಡನೆ ಸಮಾಲೋಚಿಸದೆ ಹೊರತು ಮಾಡತಕ್ಕದಲ್ಲ.

ಬಿ) i) ಅವನು 35 ವಯಸ್ಸಿಗಿಂತ ಕಡಿಮೆ ಇರಬಾರದು.

ii) ಅಂಗೀಕೃತ ವಿಶ್ವವಿದ್ಯಾಲಯದಿಂದ ಪದವಿ ಪಡೆದವನಾಗಿರಬೇಕು.

iii) ಸಾಮರ್ಥ್ಯ, ನೀತಿ ನಿಷ್ಠೆ, ಸ್ಥಾನಮಾನ ಮತ್ತು ಅರ್ಥಶಾಸ್ತ್ರ, ಕಾನೂನು, ವಾಣಿಜ್ಯ, ಲೆಕ್ಕಪತ್ರ, ಉದ್ಯಮ, ಸಾರ್ವಜನಿಕ ವಿಷಯಗಳು ಅಥವಾ ಆಡಳಿತದ ಸಾಕಷ್ಟು ಜ್ಞಾನ ಅಥವಾ ಅನುಭವ ಅಥವಾ ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ವ್ಯವಹರಿಸುವ ಸಾಮರ್ಥ್ಯವನ್ನು ತೋರಿಸಿದ ನಾಲ್ಕರು ಇತರ ಸದಸ್ಯರನ್ನು ಅವರಲ್ಲಿ ಒಬ್ಬಳು ಮಹಿಳೆ ಇರತಕ್ಕದು ಹೊಂದಿರತಕ್ಕದು.

Scanned with CamScanner

ಆದರೆ, ಈ ವಾಕ್ಯಾವಳಿಯ ಮೇರೆಗೆ ಮಾಡಲಾಗುವ ಪ್ರತಿಯೊಂದು ನೇಮಕಾತಿಯನ್ನು ಕೆಳಗೆ ಹೇಳಲಾಗಿರುವವರನ್ನು, ಅಂದರೆ,

i) ಭಾರತ ಮುಖ್ಯ ನ್ಯಾಯಮೂರ್ತಿಯವರು ನಾಮ ನಿರ್ದೇಶನ ಮಾಡುವ ಮತ್ತು ಸರ್ವೋಚ್ಚ ನ್ಯಾಯಾಲಯದ ನ್ಯಾಯಧೀಶನಾಗಿರುವ ವ್ಯಕ್ತಿಯು – ಸಭಾಪತಿ.

ii) ಭಾರತ ಸರಕಾರದ ಕಾನೂನು ವ್ಯವಹಾರಗಳ ಇಲಾಖೆಯ ಕಾರ್ಯದರ್ಶಿ – ಸದಸ್ಯ

iii) ಭಾರತ ಸರಕಾರದಲ್ಲಿ ಗ್ರಾಹಕರ ವಿಷಯಗಳ ಬಗ್ಗೆ ವ್ಯವಹರಿಸುವ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ ಸದಸ್ಯ – ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಕೇಂದ್ರ ಸರಕಾರವು ಮಾಡತಕ್ಕದು.

2) ರಾಷ್ಟ್ರೀಯ ಆಯೋಗದ ಸದಸ್ಯರಿಗೆ ಸಂದಾಯ ಮಾಡಬೇಕಾದ ವೇತನ ಅಥವಾ ಗೌರವಧನ ಮತ್ತು ಇತರ ಭತ್ತೆಗಳು ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಕೇಂದ್ರ ಸರಕಾರವು ಗೊತ್ತು ಪಡಿಸಬಹುದಾಗಿರುವಂಥವುಗಳೂ ಇರತಕ್ಕದು.

3) ರಾಷ್ಟ್ರೀಯ ಆಯೋಗದ ಪ್ರತಿಯೊಬ್ಬ ಸದಸ್ಯನೂ ಐದು ವರ್ಷಗಳ ಅವಧಿಯವರೆಗೆ ಅಥವಾ ಎಪ್ಪತ್ತು ವರ್ಷಗಳ ವಯಸ್ಸಿನ ವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ, ಪದವನ್ನು ಧರಣ ಮಾಡತಕ್ಕದು ಮತ್ತು ಅವರು ಮರು ನೇಮಕಾತಿಗೆ ಅರ್ಹರಾಗಿರತಕ್ಕದಲ್ಲ.

4) (3) ನೇ ಉಪಕಲಮು ಏನನ್ನೇ ಒಳಗೊಂಡಿರುವಾಗ್ಯೂ, ಗ್ರಾಹಕರ ಸಂರಕ್ಷಣಾ (ತಿದ್ದುಪಡಿ) ಅಧಿನಿಯಮ 1993 ರ ಪ್ರಾರಂಭಕ್ಕೆ ಮೊದಲೇ ನೇಮಿತವಾದ ವ್ಯಕ್ತಿಯು, ಸಂದರ್ಭನುಸಾರ, ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ತನ್ನ ಅವಧಿ ಮುಕ್ತಾಯ ಆಗುವವರೆಗೆ ಆ ಪದದಲ್ಲಿ ಮುಂದುವರೆಯತಕ್ಕದು.

5) ಆಯೋಗದ ಅಧ್ಯಕ್ಷನು ಸಹ ಮರು ನೇಮಕಾತಿಗೆ ಅರ್ಹನಾಗಿರುತ್ತಾನೆ.

ಈ ಸದಸ್ಯರುಗಳ ಪೈಕಿ ಶೇ. 50 ಕ್ಕಿಂತ ಹೆಚ್ಚಿನ ಸದಸ್ಯರು ನ್ಯಾಯಾಂಗದ ಹಿನ್ನೆಲೆಯನ್ನು ಹೊಂದಿದವರು ಇರಕೂಡದು. ಈ ಪರಿಚ್ಛೇದಕ್ಕೆ ಅನ್ವಯಿಸಿ ನ್ಯಾಯಾಲಯದ ಹಿನ್ನೆಲೆಯುಳ್ಳ ವ್ಯಕ್ತಿಯೆಂದರೆ ಜಿಲ್ಲಾಲ ಮಟ್ಟದ ನ್ಯಾಯಾಲಯದಲ್ಲಿ ಅಥವಾ ಅದಕ್ಕೆ ಸಮನಾದ ಟ್ರಿಬ್ಯುನಲ್‌ಗಳಲ್ಲಿ ಪ್ರಿಸೈಡಿಂಗ್ ಅಧಿಕಾರಿಯೆಂದು ಕನಿಷ್ಠ ಹತ್ತು ವರ್ಷಗಳ ಜ್ಞಾನ ಮತ್ತು ಅನುಭವವನ್ನು ಹೊಂದಿದವರು ಎಂದರ್ಥ.

ಆದರೆ, ಈ ಕೆಳಗಿನ ಅನರ್ಹತೆಗಳನ್ನು ಹೊಂದಿದ ವ್ಯಕ್ತಿಯು ಸದಸ್ಯನಾಗಲು ಬರುವದಿಲ್ಲ

(3) ನೇ ಉಪಕಲಮು ಏನನ್ನೇ ಒಳಗೊಂಡಿರುವಾಗ್ಯೂ ಗ್ರಾಹಕರ ಸಂರಕ್ಷಣಾ (ತಿದ್ದುಪಡಿ) ಅಧಿನಿಯಮ 1993ರ ಪ್ರಾರಂಭಕ್ಕೆ ಮೊದಲೇ ನೇಮಿತವಾದ ವ್ಯಕ್ತಿಯು, ಸಂದರ್ಭಾನುಸಾರ ಅಧ್ಯಕ್ಷನಾಗಿ ಅಥವಾ ಸದಸ್ಯನಾಗಿ ತನ್ನ ಅವಧಿ ಮುಕ್ತಾಯವಾಗುವವರೆಗೆ ಆ ಪದದಲ್ಲಿ ಮುಂದುವರೆಯತಕ್ಕದು.

ಯಾವುದೇ ಸದಸ್ಯನು ತನ್ನ ಹಸ್ತದಿಂದ ಬರೆದಂತೆ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವದರಿಂದ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂತಹ ರಾಜೀನಾಮೆಯು

Scanned with CamScanner

ಒಪ್ಪಿಕೊಂಡ ನಂತರ, ಅವನ ಸ್ಥಾನವು ಖಾಲಿಯಾದಂತಾಗುತ್ತದೆ; ಅದನ್ನು ಮೇಲಿನ ಅರ್ಹತೆಗಳನ್ನು ಹೊಂದಿದ ವ್ಯಕ್ತಿಯಿಂದ ತುಂಬಬಹುದು.

**ರಾಷ್ಟ್ರೀಯ ಆಯೋಗದ ಅಧಿಕಾರಗಳು** (Powers of National Commission)

ಜಿಲ್ಲಾ ವೇದಿಕೆಯು ಚಲಾಯಿಸಲು ನೀಡಿರುವಂತಹ ಎಲ್ಲ ಅಧಿಕಾರಗಳನ್ನು ರಾಷ್ಟ್ರೀಯ ಆಯೋಗಕ್ಕೂ ಸಹ ನೀಡಲಾಗಿದೆ.

**ಅಧ್ಯಕ್ಷನನ್ನು ಅಥವಾ ಸದಸ್ಯರನ್ನು ಹುದ್ದೆಯಿಂದ ತೆಗೆದುಹಾಕುವದು**
(Removal of President or Members from Office) (**ನಿಯಮ 13**)

1) ಅಧ್ಯಕ್ಷನನ್ನು ಅಥವಾ ಯಾವುದೇ ಸದಸ್ಯನನ್ನು ಆತನ ಪದದಿಂದ ಆತನು –

ಎ) ನಿರ್ಧನಿ ಎಂದು ನಿರ್ಣೀತನಾದರೆ ; ಅಥವಾ

ಬಿ) ಕೇಂದ್ರ ಸರಕಾರದ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡಿರುವ ಅಪರಾಧಕ್ಕಾಗಿ ಸಿದ್ಧದೋಷಿಯಾಗಿರುವಲ್ಲಿ; ಅಥವಾ

ಸಿ) ಅಧ್ಯಕ್ಷನೆಂದು ಅಥವಾ ಸದಸ್ಯನೆಂದು ಕಾರ್ಯನಿರ್ವಹಿಸಲು ದೈಹಿಕವಾಗಿ ಅಥವಾ ಮಾನಸಿಕವಾಗಿ ಅಸಮರ್ಥನಾದಾಗ ; ಅಥವಾ

ಡಿ) ಅಧ್ಯಕ್ಷನ ಅಥವಾ ಸದಸ್ಯನ ಪ್ರಕಾರ್ಯಗಳಿಗೆ ಬಾಧೆಯುಂಟು ಮಾಡುವ ಸಂಭವವಿರುವ ಹಣಕಾಸಿನ ಅಥವಾ ಇತರ ಹಿತಾಸಕ್ತಿಗಳನ್ನು ಪಡೆದುಕೊಂಡರೆ ; ಅಥವಾ

ಇ) ಪದದಲ್ಲಿ ಮುಂದುವರೆಯುವುದು ಸಾರ್ವಜನಿಕ ಹಿತಾಸಕ್ತಿಗೆ ಬಾಧೆಯುಂಟು ಮಾಡುವ ರೀತಿಯಲ್ಲಿ ಆತನು ತಮ್ಮ ಪದದ ದುರುಪಯೋಗ ಮಾಡಿಕೊಂಡರೆ –

ಕೇಂದ್ರ ಸರಕಾರವು ತೆಗೆದು ಹಾಕಬಹುದು.

2) (1) ನೇ ಉಪ ನಿಯಮವು ಏನನ್ನೇ ಒಳಗೊಂಡಿರುವಾಗ್ಯೂ ಅಧ್ಯಕ್ಷನನ್ನು ಅಥವಾ ಯಾವುದೇ ಸದಸ್ಯನನ್ನು ಆತನ ಪದದಿಂದ ಆ ಉಪನಿಯಮದ (ಡಿ) ಮತ್ತು (ಇ) ವಾಕ್ಯಾವಳಿಗಳಲ್ಲಿ ಹೇಳಲಾಗಿರುವ ಆಧಾರಗಳ ಮೇಲೆ, ಈ ಬಗ್ಗೆ ಕೇಂದ್ರ ಸರಕಾರವು ಗೊತ್ತುಪಡಿಸುವ ಪ್ರಕ್ರಿಯೆಯ ಮೇರೆಗೆ ವಿಚಾರಣೆ ನಡೆಸದ ಹೊರತು ಪದದಿಂದ ತೆಗೆದು ಹಾಕತಕ್ಕದು.

**ರಾಷ್ಟ್ರೀಯ ಆಯೋಗವು ಅನುಸರಿಸಬೇಕಾದ ಪ್ರಕ್ರಿಯೆ**
(Procedure to be Followed by the National Commission)

ರಾಷ್ಟ್ರೀಯ ಆಯೋಗವು ತನ್ನ ಮುಂದಿರುವ ದೂರನ್ನು/ನಡಾವಳಿಕೆಯನ್ನು ತೆಗೆದು ಹಾಕಲು ಜಿಲ್ಲಾ ವೇದಿಕೆಯು ಹೊಂದಿರುವಂತಹ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುತ್ತದೆ. ಈ ಆಯೋಗವು ಜಿಲ್ಲಾ ವೇದಿಕೆಯು ತಿಳಿಸಿದ ಕಾರ್ಯಗಳನ್ನು ಮತ್ತೆ ನಿರ್ವಹಿಸುವಂತೆ ಎದುರು ಕಕ್ಷಿದಾರನಿಗೆ ಆದೇಶಿಸುವುದು.

Scanned with CamScanner

1) ಫಿರ್ಯಾದುದಾರನು ತಾನೇ ಸ್ವತಃ ಅಥವಾ ತನ್ನ ಏಜೆಂಟನ ಮುಖಾಂತರ ಕೆಳಗೆ ಹೇಳಲಾಗಿರುವ ವಿವರಗಳನ್ನೊಳಗೊಂಡಿರುವ ಫಿರ್ಯಾದನ್ನು ರಾಷ್ಟ್ರೀಯ ಆಯೋಗಕ್ಕೆ ಸಲ್ಲಿಸತಕ್ಕದು ಅಥವಾ ರಾಷ್ಟ್ರೀಯ ಆಯೋಗದ ವಿಳಾಸಕ್ಕೆ ರಜಿಸ್ಟರ್ಡ ಅಂಚೆ ಮೂಲಕ ಕಳಿಸತಕ್ಕದು.

ಎ) ಫಿರ್ಯಾದುದಾರನ ಹೆಸರು, ವರ್ಣನೆ ಮತ್ತು ವಿಳಾಸ.

ಬಿ) ಎದುರುದಾರನ ಅಥವಾ ಸಂದರ್ಭಾನುಸಾರ ಎದುರದಾರರ, ಅವರನ್ನು ಗುರುತಿಸುವಷ್ಟರ ಮಟ್ಟಿಗೆ, ಅವರ ಹೆಸರು, ವರ್ಣನೆ ಮತ್ತು ವಿಳಾಸ.

ಸಿ) ಫಿರ್ಯಾದಿಗೆ ಸಂಬಂಧಿಸಿದಿ ಸಂಗತಿಗಳು ಮತ್ತು ಅದು ಎಲ್ಲಿ ಮತ್ತು ಎಂದು ಉಂಟಾಯಿತು ಎಂಬ ಬಗ್ಗೆ

ಡಿ) ಫಿರ್ಯಾದು ಒಳಗೊಂಡಿರುವ ಆಪಾದನೆಗಳನ್ನು ಸಮರ್ಥಿಸುವ ದಸ್ತಾವೇಜುಗಳು.

ಇ) ಫಿರ್ಯಾದುದಾರನು ಕೇಳಿರುವ ಪರಿಹಾರಗಳೂ.

2) ರಾಷ್ಟ್ರೀಯ ಆಯೋಗವು ತನ್ನ ಮುಂದಿರುವ ಫಿರ್ಯಾದನ್ನು ವಿಲೇವಾರು ಮಾಡುವಲ್ಲಿ, ಸಾಧ್ಯವಿರುವಷ್ಟರ ಮಟ್ಟಿಗೆ, ಜಿಲ್ಲಾ ವೇದಿಕೆಯು ಸ್ವೀಕರಿಸಿದ ಫಿರ್ಯಾದಿಗೆ ಸಂಬಂಧಿಸಿದಂತೆ 13 ನೇ ಕಲಮಿನ (1) ನೇ ಮತ್ತು (2) ನೇ ಉಪಕಲಮುಗಳಲ್ಲಿ ಹೇಳಲಾಗಿರುವ ಪ್ರಕ್ರಿಯೆಯನ್ನು ಅನುಸರಿಸತಕ್ಕದು.

3) ಸುಣಾವಣೆಯ ದಿನಾಂಕದಂದು ಅಥವಾ ಸುಣಾವಣೆಯನ್ನು ಮುಂದೂಡಲಾದ ಯಾವುದೇ ದಿನಾಂಕದಂದು ಪಕ್ಷಕಾರರಿಗೆ ಅಥವಾ ಅವರ ಏಜೆಂಟರಿಗೆ ರಾಷ್ಟ್ರೀಯ ಆಯೋಗದ ಮುಂದೆ ಹಾಜರಾಗುವುದು ನಿರ್ಬಂಧಕವಾದುದು ಆಗಿರತಕ್ಕದು. ಅಂಥ ದಿನಾಂಕಗಳಂದು ಫಿರ್ಯಾದುದಾರ ಅಥವಾ ಆತನ ಏಜೆಂಟನು ರಾಷ್ಟ್ರೀಯ ಆಯೋಗವು ತನ್ನ ವಿವೇಚನಾನುಸಾರ ಹಾಜರಾಗದಿರುವ ತಪ್ಪಿಗಾಗಿ ಫಿರ್ಯಾದನ್ನು ವಜಾ ಮಾಡಬಹುದು ಅಥವಾ ಫಿರ್ಯಾದನ್ನು ಅದರ ಗುಣಾವಗುಣದ ಆಧಾರದ ಮೇಲೆ ನಿರ್ಣಯಿಸಬಹುದು. ಎದುರು ಪಕ್ಷದವರು ಅಥವಾ ಅವರ ಏಜೆಂಟರು ಸುಣಾವಣಾ ದಿನದಂದು ಹಾಜರಾಗದಿರುವಲ್ಲಿ ರಾಷ್ಟ್ರೀಯ ಆಯೋಗವು ಫಿರ್ಯಾದನ್ನು ಏಕತರ್ಫಿಯಾಗಿ ನಿರ್ಣಯಿಸತಕ್ಕದು.

4) ರಾಷ್ಟ್ರೀಯ ಆಯೋಗವು, ತಾನು ಯುಕ್ತವೆಂದು ಭಾವಿಸುವಂಥ ಷರತ್ತುಗಳ ಮೇಲೆ ಮತ್ತು ವ್ಯವಹರಣೆಯ ಯಾವುದೇ ಹಂತದಲ್ಲಿ, ಫಿರ್ಯಾದಿನ ಸುಣಾವಣೆಯನ್ನು ಮುಂದೂಡಬಹುದು. ಆದರೆ ಸಾಧ್ಯವಿರುವಷ್ಟರ ಮಟ್ಟಿಗೆ ಫಿರ್ಯಾದನ್ನು, ಅದು ಮಾರಾಟ ಸರಕುಗಳ ವಿಶ್ಲೇಷಣೆ ಅಥವಾ ಪರೀಕ್ಷೆ ಅಗತ್ಯವಿರದಿರುವಲ್ಲಿ ಎದುರುದಾರರಿಗೆ ನೋಟೀಸು ತಲುಪಿದ ಮೂರು ತಿಂಗಳ ಅವಧಿಯಲ್ಲಿ ಮಾರಾಟ ಸರಕುಗಳ ವಿಶ್ಲೇಷಣೆ ಅಥವಾ ಪರೀಕ್ಷೆ ಅವಶ್ಯವಾದಲ್ಲಿ ಐದು ತಿಂಗಳ ಅವಧಿಯಲ್ಲಿ ನಿರ್ಣಯಿಸತಕ್ಕದು.

5) ರಾಷ್ಟ್ರೀಯ ಆಯೋಗವು (3) ನೇ ಉಪ ನಿಯಮದ ಮೇರೆಗೆ ವ್ಯವಹರಣೆಯನ್ನು ನಡೆಸಿದ ಅನಂತರ, ಅದು ಫಿರ್ಯಾದು ಒಳಗೊಂಡಿರುವ ಆಪಾದನೆಗಳ ಬಗ್ಗೆ ಸಮಾಧಾನ ಪಟ್ಟರೆ, ಸಂದರ್ಭಾನುಸಾರ 14 ನೇ ಕಲಮಿನ (1) ನೇ ಉಪ ಕಲಮಿನಲ್ಲಿ ಹೇಳಲಾಗಿರುವ ಒಂದು ಅಥವಾ ಹೆಚ್ಚಿನ ವಸ್ತುಗಳನ್ನು ತೆಗೆದುಕೊಳ್ಳುವಂತೆ ಎದುರು ಪಕ್ಷಕ್ಕೆ ಅಥವಾ ಪಕ್ಷದವರಿಗೆ

Scanned with CamScanner

ನಿರ್ದೇಶಿಸಿ ಆದೇಶ ಹೊರಡಿಸಬಹುದು. ರಾಷ್ಟ್ರೀಯ ಆಯೋಗವು ತಾನು ಹೊರಡಿಸಿದ ಆದೇಶವನ್ನು 23 ನೇ ಕಲಮಿನ ಮೇರೆಗೆ ಅಪೀಲನ್ನು ಸಲ್ಲಿಸದಿರುವಲ್ಲಿ ಅಥವಾ ಆ ಕಲಮಿನ ಮೇರೆಗೆ ರಾಷ್ಟ್ರೀಯ ಆಯೋಗದ ಆದೇಶವನ್ನು ಸರ್ವೋಚ್ಚ ನ್ಯಾಯಾಲಯವು ಕಾಯಂಗೊಳಿಸಿದಲ್ಲಿ, ರಾಜ್ಯ ಪತ್ರದಲ್ಲಿ ಅಥವಾ ಇತರ ಯಾವುದೇ ಮಾಧ್ಯಮದ ಮೂಲಕ ಪ್ರಕಟಪಡಿಸಬಹುದು ಮತ್ತು ಅಂಥ ಪ್ರಕಟಣೆಗಾಗಿ ರಾಷ್ಟ್ರೀಯ ಆಯೋಗದ ಅಥವಾ ಯಾವುದೇ ಮಾಧ್ಯಮದ ವಿರುದ್ಧ ಯಾವುದೇ ಕಾನೂನು ಕ್ರಮ ತೆಗೆದುಕೊಳ್ಳಲು ಬರತಕ್ಕದಲ್ಲ.

**• ಆಡಳಿತಾತ್ಮಕ ನಿಯಂತ್ರಣ (Administrative Control) (ಪರಿಚ್ಛೇದ - 24 ಬಿ)**

1. ಎಲ್ಲ ರಾಜ್ಯ ಆಯೋಗಗಳ ಮೇಲೆ ರಾಷ್ಟ್ರೀಯ ಆಯೋಗದ ಆಡಳಿತಾತ್ಮಕ ನಿಯಂತ್ರಣ ಕೆಳಗೆ ಹೇಳಲಾಗಿರುವ, ಅಂದರೆ –

i) ಹೂಡಲಾದ, ವಿಲೇಮಾಡಲಾದ ಮತ್ತು ಇತ್ಯರ್ಥದಲ್ಲಿ ಇರುವ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ನಿಯತಕಾಲಿಕ ವಿವರ ಪಟ್ಟಿಕೆಗಳನ್ನು ತರಿಸಿಕೊಳ್ಳುವುದು.

ii) ಪ್ರಕರಣಗಳ ಸುಣಾವಣೆಗೆ, ಒಂದು ಪಕ್ಷದವರು ಹಾಜರುಪಡಿಸಿದ ದಸ್ತಾವೇಜುಗಳ ಪ್ರತಿಗಳನ್ನು ಎದುರು ಪಕ್ಷದವರಿಗೆ ಮುಂಚಿತವಾಗಿಯೇ ಜಾರಿಗೊಳಿಸುವುದಕ್ಕೆ ಯಾವುದೇ ಭಾಷೆಯಲ್ಲಿ ಬರೆದ ತೀರ್ಪಿನ ಇಂಗ್ಲೀಷ ಭಾಷಾಂತರವನ್ನು ಒದಗಿಸುವುದಕ್ಕೆ, ದಸ್ತಾವೇಜುಗಳ ಪ್ರತಿಗಳನ್ನು ತೀವ್ರವಾಗಿ ಒದಗಿಸುವುದಕ್ಕೆ ಸಂಭಂಧಪಟ್ಟಂತೆ ಏಕರೂಪದ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಅನುದೇಶಗಳನ್ನು (instructions) ಹೊರಡಿಸುವುದು.

iii) ರಾಜ್ಯ ಆಯೋಗಗಳ ಅಥವಾ ಜಿಲ್ಲಾ ವೇದಿಕೆಗಳ ಕಾರ್ಯನಿರ್ವಹಣೆಯನ್ನು ಅವುಗಳ ಅರೆ ನ್ಯಾಯಿಕ ಸ್ವಾತಂತ್ರ್ಯದಲ್ಲಿ ಯಾವುದೇ ರೀತಿಯ ಹಸ್ತಕ್ಷೇಪವಾಗದಂತೆ ಈ ಅಧಿನಿಯಮದ ಗುರಿಗಳನ್ನು ಮತ್ತು ಉದ್ದೇಶಗಳನ್ನು ಸುನಿಶ್ಚಿತಗೊಳಿಸಲು ಸಾಮಾನ್ಯವಾಗಿ ಮೇಲ್ವಿಚಾರಣೆ ಮಾಡುವುದು.

2) ರಾಜ್ಯ ಆಯೋಗಕ್ಕೆ – (1) ನೇ ಉಪಕಲಮಿನಲ್ಲಿ ಉಲ್ಲೇಖಿಸಿದ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ತನ್ನ ಅಧಿಕಾರ ವ್ಯಾಪ್ತಿಯಲ್ಲಿರುವ ಎಲ್ಲ ಜಿಲ್ಲಾ ವೇದಿಕೆಗಳ ಮೇಲೆ ಆಡಳಿತಾತ್ಮಕ ನಿಯಮತ್ರಣವಿರತಕ್ಕದು.

**• ರಾಷ್ಟ್ರೀಯ ಆಯೋಗದ ವ್ಯಾಪ್ತಿ (ಪರಿಚ್ಛೇದ 21)**
(Jurisdiction of the National Commission)

ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು ರಾಷ್ಟ್ರೀಯ ಆಯೋಗಕ್ಕೆ–

ಎ) i) ಸರಕುಗಳ ಅಥವಾ ಸೇವೆಗಳ ಮೌಲ್ಯವು ಮತ್ತು ಕೇಳಲಾಗಿರುವ ಪರಿಹಾರ ಧನವು, ಯಾವುದಾದರೂ ಇದ್ದರೆ, 1 ಕೋಟಿ ರೂಪಾಯಿಗಳನ್ನು ಮೀರುವ ಫಿರ್ಯಾದನ್ನು ಸ್ವೀಕರಿಸಲು; ಮತ್ತು

i) ಯಾವುದೇ ರಾಜ್ಯ ಆಯೋಗದ ಆದೇಶಗಳ ವಿರುದ್ಧದ ಅಪೀಲುಗಳನ್ನು ಸ್ವೀಕರಿಸಲು; ಮತ್ತು

Scanned with CamScanner

ಬಿ) ಯಾವುದೇ ರಾಜ್ಯ ಆಯೋಗದ ಮುಂದೆ ಇತ್ಯರ್ಥದಲ್ಲಿರುವ ಅಥವಾ ಇತ್ಯರ್ಥಗೊಳಿಸಲಾಗಿರುವ ಯಾವುದೇ ಗ್ರಾಹಕರ ವಿವಾದದಲ್ಲಿ ಅಂಥ ರಾಜ್ಯ ಆಯೋಗವು ಕಾನೂನು ಮೇರೆಗೆ ತನ್ನಲ್ಲಿ ನಿಹಿತವಾಗಿಲ್ಲದಿರುವ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಿದೆ ಅಥವಾ ಹಾಗೆ ತನ್ನಲ್ಲಿ ನಿಹಿತವಾಗಿರುವ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ವಿಫಲಾಗಿದೆ ಅಥವಾ ತನ್ನ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವಲ್ಲಿ ಕಾನೂನು ಸಮ್ಮತವಲ್ಲದ ರೀತಿಯಲ್ಲಿ ನಡೆದುಕೊಂಡಿದೆ ಅಥವಾ ಮಹತ್ವದ ಅಕ್ರಮವೆಸಗಿದೆ ಎಂದು ರಾಷ್ಟ್ರೀಯ ಆಯೋಗಕ್ಕೆ ಕಂಡು ಬಂದಲ್ಲಿ ದಾಖಲೆಗಳನ್ನು ತರಿಸಿಕೊಳ್ಳಲು ಮತ್ತು ಸಮುಚಿತ ಆದೇಶ ಮಾಡಲು ಅಧಿಕಾರ ವ್ಯಾಪ್ತಿ ಇರತಕ್ಕದು.

- **ಸರ್ವೋಚ್ಚ ನುಯಾಲಯಕ್ಕೆಕ ಅಪೀಲು (ಪರಿಚ್ಛೇದ 23)**
  (Appeal to Supreme Court)

ರಾಷ್ಟ್ರೀಯ ಆಯೋಗವು ತನಗೆ 21 ನೇ ಕಲಮಿನ (ಎ) ಉಪಕಲಮಿನ (i)ನೇ ಉಪವಾಕ್ಯಾವಳಿಯ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಿದ ಆದೇಶದಿಂದ ಬಾಧಿತನಾದ ವ್ಯಕ್ತಿಯು ಆ ಆದೇಶದ ದಿನಾಂಕದಿಂದ ಮೂವತ್ತು ದಿವಸಗಳ ಅವಧಿಯೊಳಗೆ ಸರ್ವೋಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು.

ಸದರೀ ಮೂವತ್ತು ದಿವಸಗಳ ಅವಧಿ ಮುಗಿದ ನಂತರ ಸಲ್ಲಿಸಿದ ಅಪೀಲನ್ನು ಆ ಅವಧಿಯಲ್ಲಿ ಅಪೀಲನ್ನು ಸಲ್ಲಿಸದಿರುವುದಕ್ಕೆ ಸಾಕಷ್ಟು ಕಾರಣವಿದೆ ಎಂದು ತನಗೆ ಸಮಾಧಾನವಾದರೆ ಸರ್ವೋಚ್ಚ ನ್ಯಾಯಾಲಯವು ಅದನ್ನು ಸ್ವೀಕರಿಸಬಹುದು.

ಉದಾಹರಣೆಗಾಗಿ – **District Engineer, Telecom Chopra v/s Raghu Jee Rajendra Sarobar (1995) NCDRC.** ಈ ಪ್ರಕರಣದಲ್ಲಿ ದಿನಾಂಕ 15.11.1994 ರಂದು ಜಿಲ್ಲಾ ವೇದಿಕೆಯು ಆದೇಶವೊಂದನ್ನು ಪಾಸುಮಾಡಿತು. ಫಿರ್ಯಾದಿದಾರನಿಂದ ಆದೇಶದ ದೃಢೀಕರಣ ಪ್ರತಿಯ ದಿನಾಂಕ 27.12.1994 ರಂದು ಸ್ವೀಕರಿಸಲ್ಪಟ್ಟಿತು. ಜಿಲ್ಲಾ ವೇದಿಕೆಯು ದೃಢೀಕರಣದ ಪ್ರತಿ ನೀಡಿದ 30 ದಿನಗಳ ಒಳಗಾಗಿಯೇ ದಿನಾಂಕ 18.1.1995ರಂದು ಅಪೀಲನ್ನು ಸಲ್ಲಿಸಲಾಯಿತು. ಈ ಅಪೀಲನ್ನು ರಾಜ್ಯ ಆಯೋಗವು ಗುಣಗಳ ಆಧಾರದಿಂದ ಸ್ವೀಕರಿಸಬೇಕಾಗಿತ್ತು. ಅದನ್ನು ಸಮಯದ ಆಧಾರದಿಂದ ತಿರಸ್ಕರಿಸಿದ್ದು ಸಮಂಜಸವಲ್ಲವೆಂದು ರಾಷ್ಟ್ರೀಯ ಆಯೋಗವು ತೀರ್ಮಾನಿಸಿತು.

- **ಕ್ಷುಲ್ಲಕ ಇಲ್ಲವೆ ಕಿರುಕಳಕಾರಿ ದೂರುಗಳನ್ನು ಕಿತ್ತು ಹಾಕುವದು (ಪರಿಚ್ಛೇದ 26)**
  (Dismissal of Frivolous or Vexatious Complaints)

ಯಾವುದೇ ದೂರನ್ನು ದಾಖಲು ಮಾಡಿಕೊಂಡ ನಂತರ, ಅದು ಕ್ಷುಲ್ಲಕ ಅಥವಾ ಕಿರುಕಳವೆಂದು ಕಂಡು ಬಂದರೆ, ಜಿಲ್ಲಾ ವೇದಿಕೆ ರಾಜ್ಯ ಹಾಗೂ ರಾಷ್ಟ್ರ ಆಯೋಗವು ಅಂತಹ ದೂರನ್ನು ಕಿತ್ತು ಹಾಕಬಹುದು. ಫಿರ್ಯಾದಿದಾರನು ಎದುರು ಪಕ್ಷದವನ ವೆಚ್ಚ ಭರಿಸುವಂತೆ, ರೂ. 10 ಸಾವಿರಗಳಿಗೆ ಮೀರದಂತೆ, ಪಾವತಿಸಲು ಆದೇಶಿಸಬಹುದು.

ಉದಾಹರಣೆಗಾಗಿ, ತಪ್ಪು ರೋಗ ಕಂಡುಹಿಡಿದದಕ್ಕೆ ವೈದ್ಯ ಮತ್ತು ಆಸ್ಪತ್ರೆಯವರಿಗೆ ದಂಡ ವಿಧಿಸಬೇಕೆಂದು ಕೇಳಲಾಗಿತ್ತು, ರೋಗಿಯು ನಂತರ ಪರೀಕ್ಷಿಸಿಕೊಂಡಾಗ ಹೃದಯದ

Scanned with CamScanner

ರೋಗವಿದ್ದದ್ದು ಕಂಡು ಬಂದಿತು. ಆದರೆ, ಅವನಿಗೆ ವೈದ್ಯರು ಕಿಡ್ನೀಟ್ಯೂಯ ಚಿಕಿತ್ಸೆ ನೀಡಿದ್ದರು. ತಪ್ಪು ರೋಗ ಕಂಡು ಹಿಡಿದಿದ್ದಕ್ಕೆ ರೂ. 55,90,000ಗಳ ಪರಿಹಾರಕ್ಕೆ ದೂರು ದಾಖಲಿಸಿದನು. ರಾಷ್ಟ್ರೀಯ ಆಯೋಗವು ದೂರನ್ನು ಆಧಾರರಹಿತ ಮತ್ತು ಸಕಾರಣಗಳಿಲ್ಲದ್ದೆಂದು ನಿರ್ಣಯಿಸಿ, ದೂರು ಸಲ್ಲಿಸಿದ ವ್ಯಕ್ತಿಗೆ ದಂಡ ವಿಧಿಸಿ, ವೈದ್ಯರಿಗೆ ಮತ್ತು ಆಸ್ಪತ್ರೆಗೆ ರೂ. 10 ಸಾವಿರಗಳನ್ನು ಪಾವತಿಸಲು ಆದೇಶಿಸಿತು.

ಉದಾಹರಣೆಗಾಗಿ **Nava Bharat Land Development Finance Limited. v/s Punjab National Bank, dt. 9.12.92 NC.** ಕೆಲವೊಂದು ಸಂದರ್ಭಗಳಲ್ಲಿ ಗ್ರಾಹಕರಿಗೆ ನೀಡಿದ ಹಕ್ಕುಗಳ ದುರುಪಯೋಗ ಪಡೆದು, ಲಾಭ ಮಾಡಿಕೊಳ್ಳಲು ದೂರುಗಳನ್ನು ದಾಖಲಿಸುತ್ತಾರೆ. ಅಂತಹ ದೂರುಗಳನ್ನು ಕ್ಷುಲ್ಲಕ ಇಲ್ಲವೆ ಕಿರುಕಳಕಾರಿಯೆಂದು ತೀರ್ಮಾನಿಸಲಾಗುತ್ತದೆ. ಯಾವುದೇ ಕೋರ್ಟ್ ಫೀ ಪಾವತಿಸಬೇಕಾಗಿಲ್ಲವೆಂಬ ಕಾರಣಕ್ಕೆ ದೂರುಗಳನ್ನು ನಿಲ್ಲಿಸಿದಾಗ, ರಾಷ್ಟ್ರೀಯ ಆಯೋಗವು ಅಂತಹ ಫಿರ್ಯಾದುದಾರನ ಮೇಲೆ ರೂ. 10 ಸಾವಿರಗಳಷ್ಟು ದಂಡವನ್ನು ವಿಧಿಸಿತು.

## 5.8. ಇತರ ಪರಿಚ್ಛೇದ/ಸಂಕೀರ್ಣಗಳು (Miscellaneous)

ಈ ಅಧಿನಿಯಮದ ನಾಲ್ಕನೇಯ ಅಧ್ಯಾಯವು ಸಂಕೀರ್ಣ ವಿಷಯಗಳ ಕುರಿತು ರೂಪರೇಷೆ ನೀಡುತ್ತದೆ.

### • ಸದ್ಭಾವನೆಯಿಂದ ಕೈಕೊಂಡ ಕ್ರಮದ ರಕ್ಷಣೆ (ಪರಿಚ್ಛೇದ 28) (Protection of Action Taken in Good faith)

ಜಿಲ್ಲಾ ವೇದಿಕೆಯ, ರಾಜ್ಯ ಆಯೋಗದ ಅಥವಾ ರಾಷ್ಟ್ರೀಯ ಆಯೋಗದ ಸದಸ್ಯರ ಅಥವಾ ಜಿಲ್ಲಾ ವೇದಿಕೆಯ, ರಾಜ್ಯ ಆಯೋಗದ ಅಥವಾ ರಾಷ್ಟ್ರೀಯ ಆಯೋಗದ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾವನೇ ಅಧಿಕಾರಿಯ ಅಥವಾ ವ್ಯಕ್ತಿಯ ವಿರುದ್ಧ ಅಂಥ ಸದಸ್ಯನು, ಅಧಿಕಾರಿ ಅಥವಾ ವ್ಯಕ್ತಿ ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮ ಅಥವಾ ಮಾಡಲಾದ ಆದೇಶದ ಮೇರೆಗೆ ಆದೇಶದ ಅಮಲ ಜಾರಿಗಾಗಿ ಅಥವ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದಕ್ಕೂ ಸಂಬಂಧಿಸಿದಂತೆ ದಾವೆ ಹೂಡಲು, ಪ್ರಾಸಿಕ್ಯೂಶನ ಮಾಡಲು ಅಥವಾ ಇತರ ಕಾನೂನು ಕ್ರಮಕೈಕೊಳ್ಳಲು ಅವಕಾಶ ಇಲ್ಲ.

### • ಕ್ಲಿಷ್ಟತೆಗಳನ್ನು ಪರಿಹರಿಸಲು ಅಧಿಕಾರ (ಪರಿಚ್ಛೇದ 29) (Power to Remove Difficulties)

1) ಈ ಅಧಿನಿಯಮದ ಉಪಬಂಧಗಳನ್ನು ಆಚರಣೆಗೆ ತರುವಲ್ಲಿ ಕ್ಲಿಷ್ಟತೆ ಉಂಟಾದರೆ, ಕೇಂದ್ರ ಸರಕಾರವು ರಾಜ್ಯ ಪತ್ರದಲ್ಲಿ ಆದೇಶದ ಮೂಲಕ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದಂತೆ ಕ್ಲಿಷ್ಟತೆಯನ್ನು ತೆಗದು ಹಾಕಲು ಅವಶ್ಯವೆಂದು ಅಥವಾ ಸಮುಚಿತವೆಂದು ಕಾಣುವಂಥ ಉಪಬಂಧಗಳನ್ನು ರಚಿಸತಕ್ಕದು.

ಆದರೆ, ಈ ಅಧಿನಿಯಮ ಪ್ರಾರಂಭದ ಎರಡು ವರ್ಷಗಳ ಅವಧಿಯ ನಂತರ ಅಂಥ ಯಾವುದೇ ಆದೇಶವನ್ನು ಮಾಡತಕ್ಕದಲ್ಲ.

Scanned with CamScanner

2) ಈ ಕಲಮಿನ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ಕೂಡಲೇ ಸಾಧ್ಯವಾದಷ್ಟು ಬೇಗನೇ ಸಂಸತ್ತಿನ ಎರಡೂ ಸದನಗಳ ಮುಂದೆ ಮಂಡಿಸತಕ್ಕದು.

- **ಖಾಲಿ ಸ್ಥಾನಗಳು ಅಥವಾ ನೇಮಕಾತಿಯಲ್ಲಿ ನ್ಯೂನತೆಯು ಆದೇಶಗಳನ್ನು ಅಸಿಂಧುಗೊಳಿಸತಕ್ಕದಲ್ಲ (ಪರಿಚ್ಛೇದ 29 ಎ)**

(Vanacies or Defect in Appointment not to Invalidate Orders)

ಜಿಲ್ಲಾ ವೇದಿಕೆಯ, ರಾಜ್ಯ ಆಯೋಗದ ಅಥವಾ ರಾಷ್ಟ್ರೀಯ ಆಯೋಗದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು ಅದರ ಸದಸ್ಯರುಗಳಲ್ಲಿ ಇರುವ ಖಾಲಿ ಸ್ಥಾನದ ಅಥವಾ ಅದರ ರಚನೆಯಲ್ಲಿನ ಯಾವುದೇ ನ್ಯೂನ್ಯತೆ ಕಾರಣದಿಂದಾಗಿ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

- **ನಿಯಮಗಳನ್ನು ರಚಿಸುವ ಶಕ್ತಿ (ಪರಿಚ್ಛೇದ 30)** (Power to Make Rules)

1) ಕೇಂದ್ರ ಸರಕಾರವು ಅಧಿಸೂಚನೆಯ ಮೂಲಕ ಉಪಬಂಧಗಳನ್ನು ಕಾರ್ಯಾಚರಣೆಯಲ್ಲಿ ತರುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

2) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಈ ಅಧಿನಿಯಮದ 7 ನೇ ಕಲಮಿನ ಕಲಮುಗಳು ಒಳಗೊಂಡ ಉಪಬಂಧಗಳನ್ನು ಕಾರ್ಯಾಚರಣೆಯಲ್ಲಿ ತರುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

- **ನಿಯಮಗಳನ್ನು ಮಂಡಿಸುವುದು (ಪರಿಚ್ಛೇದ 31)** (Laying of Rules)

1) ಅಧಿನಿಯಮದ ಮೇರೆಗೆ ಕೇಂದ್ರ ಸರಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು ಅವುಗಳನ್ನು ರಚಿಸಿದ ಅನಂತರ ಸಾಧ್ಯವಾದಷ್ಟು ಬೇಗನೇ, ಸಂಸತ್ತಿನ ಎರಡೂ ಸದನಗಳ ಮುಂದೆ ಅವು ಅಧಿವೇಶನದಲ್ಲಿ ಇರುವಾಗ ಅವರು ಒಟ್ಟಾಗಿ ಒಂದು ಅಧಿವೇಶನದಲ್ಲಿ ಅಥವಾ ಒಂದರ ನಂತರ ಒಂದು ಬರುವ ಎರಡು ಅಥವಾ ಹೆಚ್ಚಿನ ಸಂಖ್ಯೆಯ ಅಧಿವೇಶನದಲ್ಲಿ ಮೂವತ್ತು ದಿವಸಗಳ ಅವಧಿಯ ಅಧಿವೇಶನದಲ್ಲಿ ಇರುವಾಗ ಮಂಡಿಸತಕ್ಕದು ಮತ್ತು ಅಂಥ ಅಧಿವೇಶನದ ನಿಕಟ ನಂತರದ ಅಧಿವೇಶನದ ಅಥವಾ ಮೇಲೆ ಹೇಳಿದ ಒಂದರ ನಂತರ ಒಂದು ಅಧಿವೇಶನಗಳ, ಅಧಿವೇಶನಗಳ ಮುಕ್ತಾಯದ ಪೂರ್ವದಲ್ಲಿ ಎರಡೂ ಸದನಗಳು ನಿಯಮದಲ್ಲಿ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಎರಡೂ ಸದನಗಳು ನಿಯಮವನ್ನು ರಚಿಸಬಾರದೆಂದು ಒಪ್ಪಿದರೆ, ಸಂದರ್ಭಾನುಸಾರ ಅನಮತರ ನಿಯಮವು ಕೇವಲ ಮಾರ್ಪಾಡಾದ ರೂಪದಲ್ಲಿಯೇ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗತಕ್ಕದಲ್ಲ; ಆದರೆ ಏನೇ ಆದಾಗ್ಯೂ, ಅಂಥ ಮಾರ್ಪಾಡು ಅಥವಾ ರದ್ದುಪಡಿಸುವಿಕೆಯು, ಅಂಥ ನಿಯಮದ ಮೇರೆಗೆ ಈ ಮುಂಚೆ ಮಾಡಿದ ಯಾವುದಕ್ಕೂ ಬಾಧೆಯುಂಟು ಮಾಡುವುದಿಲ್ಲ.

2) ಈ ಅಧಿನಿಯಮದ ಮೇರೆಗೆ ರಾಜ್ಯ ಸರಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ನಂತರ ಸಾಧ್ಯವಾದಷ್ಟು ಬೇಗನೇ ರಾಜ್ಯದ ವಿಧಾನ ಮಂಡಲದ ಮುಂದೆ ಮಂಡಿಸತಕ್ಕದು.

## 5.8. ಉಪಸಂಹಾರ (Conclusion)

ಪ್ರಸಕ್ತ ದಿನಗಳಲ್ಲಿ ಗ್ರಾಹಕ ಸಂರಕ್ಷಣಾ ಅಧಿನಿಯಮವು ಕೇಂದ್ರ ಹಾಗೂ ರಾಜ್ಯ

Scanned with CamScanner

ಸರ್ಕಾರಗಳ ಕ್ರಿಯಾಶೀಲ ಪ್ರಯತ್ನದಿಂದಾಗಿ ನಾಗರೀಕರಲ್ಲಿ ಸಾಕಷ್ಟು ಅರಿವು ಜಾಗೃತಿ ಮೂಡಿಸುತ್ತಿದೆ. ಈ ಕಾಯ್ದೆಯಲ್ಲಿ ಇನ್ನೂ ಕೆಲವು ಸೇವೆಗಳನ್ನು ಅಳವಡಿಸಬೇಕಾಗಿದೆ. ಅವುಗಳಿಗೆ ನಿಖರವಾದ ವ್ಯಾಖ್ಯಾಯನ ಮತ್ತು ಕಾರಣಗಳನ್ನು ವಿವರಿಸಬೇಕು. ವಿವಿಧ ತರಹದ ವೇದಿಕೆ ಹಾಗೂ ಆಯೋಗಗಳು ನೀಡುತ್ತಿರುವ ನಿರ್ಣಯಗಳು ಗ್ರಾಹಕ ಸಮೂಹದಲ್ಲಿ ಅವುಗಳಲ್ಲಿನ ವಿಶ್ವಾಸವನ್ನು ಮತ್ತು ಅವುಗಳ ಮಹತ್ವದ ಪಾತ್ರವನ್ನು ಹೆಚ್ಚಿಸುತ್ತಿವೆ.

Scanned with CamScanner